॥ ಶ್ರೀ ಕುಲದೇವತಾ ಪ್ರಸನ್ನಾ ॥



ಗಣಪತಿಯೇ ನಮಃ ॥ ನಿರ್ವಿಘ್ನಮಸ್ತು ॥

ತ್ರಿಭಾಷಾ ಸಂಯುತ

ಯಕ್ಷಗಾನ ಜಯವಿಜಯ

ಲೇಖಕರು:

ಅಂಬೇಮೂಲೆ ಗೋವಿಂದ ಭಟ್.

1964

ಪ್ರಕಾಶಕರು:

ಕೆ. ನರಸಿಂಹ ಪೈ ಬ್ರದರ್ಸ್, ಅಡ್ಯನಡ್ಕ, ದ. ಕ.

ಬೆಲೆ: 0-50

Sri Ramnath Transport, Mangalpady

UPPALA [Kerala]

ಮಂಗಳೂರು, ಮೈಸೂರು, ಮಂಡ್ಯ,

ಕಲ್ಲಿಕೋಟೆ, ಕೊಚ್ಚಿಗಳಿಗೆ

ಸರಕು ಸಾಗಾಟಕ್ಕೆ ನಮ್ಮಲ್ಲಿ ವಿಚಾರಿಸಿರಿ

Prop. M. Upendra Shenoy & Co.,
Mangalpady
P. O: Bunder, MANGALORE.

ಪ್ರತಿದಿನದ ಬ್ರೆಡ್, ಟೋಸ್ಟ್ ರಸ್ಕ್, ಬೆಣ್ಣೆ-ಬಟರ್
ಕೇಕ್, ಉತ್ತಮ ಬಿಸ್ಕೇಟ್‌ಗಳಿಗೆ ಸಂದರ್ಶಿಸಿರಿ

ಬಿ. ಆರ್. ಬೇಕರಿ

ರೈಲ್ವೆಸ್ಟೇಶನ್ ರೋಡ್, ಉಪ್ಪಳ. (ಕೇರಳ)

Prop: **B. RAJEEVA.**

॥ ಶ್ರೀಃ ಕುಲದೇವತಾ ಪ್ರಸನ್ನಾ ॥

ಗಣಪತಯೇ ನಮಃ ॥ ನಿರ್ವಿಘ್ನಮಸ್ತು ॥

ತ್ರಿಭಾಷಾ ಸಂಯುತ

ಯಕ್ಷಗಾನ ಜಯವಿಜಯ

ಲೇಖಕರು:
ಅಂಬೇಮೂಲೆ ಗೋವಿಂದ ಭಟ್.

1964

ಪ್ರಕಾಶಕರು:
ಕೆ. ನರಸಿಂಹ ಪೈ ಬ್ರದರ್ಸ್, ಅಡ್ಯನಡ್ಕ, ದ. ಕ.

ಬೆಲೆ: 0=50

ಈ ಲೇಖಕರ ಅಚ್ಚಾದ ಕೃತಿಗಳು

1. ಯಕ್ಷಗಾನ ರಾಜಹಂಸವಿಜಯ.
2. ತ್ರಿಭಾಷಾಸಂಯುತ ಜಯವಿಜಯ.

ಅಚ್ಚಾಗಲಿರುವ ಹೊತ್ತಗೆಗಳು

1. ಯಕ್ಷಗಾನ 'ರಾಜಾಗ್ರೇಸರ ಖಟ್ವಾಂಗ ಚರಿತೆ'.
2. ,, 'ಪೃಥುರಾಜ ದಿಗ್ವಿಜಯ'
3. ,, 'ವಿರೂಪಾಕ್ಷ ಕಾಳಗ'.
4. ,, 'ತಾರಾಶಶಾಂಕ 'ಅಥವಾ ಬುಧೋದಯ'.
5. ,, 'ಫ್ಲೋರ್ಜೆರಿ ಪ್ರಸಂಗ' (ಸಾಮಾಜಿಕ)

ಮುನ್ನುಡಿ

'ಜಯವಿಜಯ'ವೆಂಬೀ ಯಕ್ಷಗಾನ ಕೃತಿಯನ್ನು ರಚಿಸಿದ ನನ್ನ ಆಪ್ತ ಮಿತ್ರರಾದ ಶ್ರೀ ಅಂಬೇಮೂಲೆ ಗೋವಿಂದ ಭಟ್ಟರು ಈಗಾಗಲೇ 'ರಾಜಹಂಸವಿಜಯ' ಮುಂತಾದ ಯಕ್ಷಗಾನ ಕೃತಿ ರಚನೆಯಿಂದ ನಾಡಿನ ಕಲಾಪ್ರೇಮಿಗಳಿಗೆ ಪರಿಚಿತರಾಗಿದ್ದಾರೆ. ಎಳೆಯ ಹರೆಯದಿಂದಲೇ ಪ್ರತಿಭೆ ಹಾಗೂ ಪ್ರಯತ್ನಗಳ ಫಲವಾಗಿ ಇವರು ಕವಿತಾ ರಚನೆಗೆ ತೊಡಗಿ ಈಗ ಪ್ರಸಂಗಗಳ ಪ್ರಕಟಣೆ ಹಾಗೂ ವಿದ್ವಜ್ಜನರ ಮತ್ತು ಕಲಾಭಿಮಾನಿಗಳ ಪ್ರಶಂಸೆಗೆ ಪಾತ್ರರಾಗಿದ್ದು ಈ ದಾರಿಯಲ್ಲಿ ಮುಂದುವರಿದು ನಾಡು ನುಡಿಗಳ ಸೇವೆ ಸಲ್ಲಿಸುವ ಇವರ ಈ ತೆರನ ಸಾಹಸೋದ್ಯಮವು ಪ್ರಶಂಸನೀಯವಾಗಿದೆ.

ಅಳಿಯಕಟ್ಟುಯೆಂದು ಪ್ರಸಿದ್ಧವಾಗಿರುವ ತುಳುನಾಡಿನ ಒಂದು ಸಾಮಾಜಿಕ ಕಟ್ಟು ಕಟ್ಟಳೆಯ ಕುರಿತಾಗಿರುವ ಭೂತಾಳಪಾಂಡ್ಯನ ಕಥೆಯನ್ನು ಶ್ರೀ ಗೋವಿಂದ ಭಟ್ಟರು ಯಕ್ಷಗಾನ ರಂಗಕ್ಕೆ ಅನುಕೂಲವಾಗುವಂತೆ ಅಳವಡಿಸಿಕೊಂಡು ಈ ಪ್ರಸಂಗವನ್ನು ರಚಿಸಿದ್ದಾರೆ. ನಮ್ಮ ನಾಡಿನ ಜಾನಪದ ಕಲೆಯಾಗಿದ್ದರೂ, ಪಂಡಿತ ಪ್ರೌಢರಿಂದಲೂ ಮಾನ್ಯತೆ ಪಡೆದ ಯಕ್ಷಗಾನಕ್ಕೆ ಒಪ್ಪುವ ಲಲಿತವೂ ಆಕರ್ಷಕವೂ ಆದ ಶೈಲಿಯಲ್ಲಿ ಈ ಪ್ರಸಂಗ ಬರೆಯಲ್ಪಟ್ಟಿದ್ದು ಅಲ್ಲಲ್ಲಿ ರಂಗಸ್ಥಳದ ನಾಟಕೀಯತೆಗೆ ಪೋಷಕವಾಗುವಂತೆ ಪಾತ್ರೋಚಿತವಾದ ಭಾಷೆಯನ್ನು ಅಳವಡಿಸಿದುದನ್ನು ಸಹೃದಯ ಸಾಮಾಜಿಕರು ಮೆಚ್ಚುವರೆಂದು ನಾನು ನಿಜವಾಗಿ ನಂಬಿದ್ದೇನೆ. ಕಾಳಿದಾಸ ಭಾಸಾದಿ ಮಹಾಕವಿಗಳೂ ತಮ್ಮ ದೃಶ್ಯ ಪ್ರಬಂಧಗಳಲ್ಲಿ ಪಾತ್ರೋಚಿತ ಭಾಷೆಯನ್ನು ಉಪಯೋಗಿಸಿದಂತಹ ಔಚಿತ್ಯವನ್ನು ನಾವು ಇಲ್ಲಿ ಸ್ಮರಿಸಬೇಕಾಗಿದೆ. ಈ ತೆರನ ಸತ್ಸಂಪ್ರದಾಯ ದೃಶ್ಯ ಕಾವ್ಯಗಳಿಗೆ ಸಹಜವಾದುದೆಂದು ನಾನು ಭಾವಿಸುತ್ತೇನೆ.

ಕಾಸರಗೋಡಿನ ಈ ನೆಲ ಪಾರ್ತಿಸುಬ್ಬನಂತಹ ಯಕ್ಷಗಾನ ಆಚಾರ್ಯರು-ಸೀಮಾ ಪುರುಷರು ಜನ್ಮತಳೆದ ಕನ್ನಡನಾಡಿನ ಪಾವನ ಭೂಮಿ. ಇಡೀ ಕನ್ನಡ ನಾಡಿನಲ್ಲಿ ಹಿರಿಯ ಸಂಶೋಧಕರೆಂದೂ, ಕನ್ನಡದ ರಾಷ್ಟ್ರಕವಿ

ಗಳಿಂದೂ, ಅಸಾಮಾನ್ಯ ವಿದ್ವಾಂಸರೆಂದೂ ಪ್ರಸಿದ್ಧರಾದ ಶ್ರೀ ಶ್ರೀ ಗೋವಿಂದ ಪೈಗಳು ನೆಲಸಿದ ನೆಲ. ದೌರ್ಭಾಗ್ಯವಶಾತ್ ಅಥವಾ ಪ್ರಮಾದವಶಾತ್ ಇಂದು ಕೇರಳಕ್ಕೆ ತಳ್ಳಲ್ಪಟ್ಟಿದ್ದರೂ ಕನ್ನಡ ಕವಿಗಳು-ಗಮಕಿಗಳು–ವೀರರು ಇಂದಿಗೂ ಮೆರೆವ ಪ್ರದೇಶ. ಆದಕ್ಕೆ ಶ್ರೀ ಗೋವಿಂದ ಭಟ್ಟರ ಈ ತೆರನ ಕೃತಿರಚನೆ ಮತ್ತು ಉತ್ಸಾಹವೇ ಉತ್ತಮ ನಿದರ್ಶನವಾಗಿದೆ.

ಇಂತಹ ಸತ್ಕಾರ್ಯದಲ್ಲಿ, ಸಾಹಿತ್ಯ ಕಲಾದೇವಿಯ ಆರಾಧನೆಯನ್ನು ತೊಡಗಿದ ಶ್ರೀಯುತರಿಗೆ ಭಗವಂತನು ಸಕಲ ಸಹಾಯಗಳನ್ನೂ ಶ್ರೇಯಸ್ಸುಗಳನ್ನೂ ದಯಪಾಲಿಸಲೆಂದು ಆತನೊಡನೆ ಪ್ರಾರ್ಥಿಸುತ್ತೇನೆ.

ಪೆರಡಾಲ
27-7-1964

ವಿದ್ವಾನ್ ಕಯ್ಯಾರ ಕಿಂಞಣ್ಣ ರೈ, M. A.

ವಿಜ್ಞಾಪನೆ

ಯಕ್ಷಗಾನವೆಂಬುದು ಪುರಾಣೇತಿಹಾಸಗಳಲ್ಲಿ ಅಡಕವಾಗಿರುವ ಜ್ಞಾನ ಹಾಗೂ ಸಂಸ್ಕೃತಿಯನ್ನು ಸುಲಭವಾಗಿ ನಾಡಜನರಿಗೆ ತಿಳಿಯ ಪಡಿಸುವ ಶ್ರೇಷ್ಟವಾದ ಕಲೆಯೆಂಬುದು ಸತ್ಯ. ಅದು ಈ ವೊದಲು ಮಾಡಿಕೊಂಡು ಬಂದ ಸೇವೆಯಿಂದಲೇ ಪ್ರತಿಯೋರ್ವನಿಗೂ ಮನವರಿಕೆ ಯಾಗಿರಬಹುದು. ಎಳವೆಯಲ್ಲಿಯೇ ನನ್ನ ಮನವನ್ನು ಆಕರ್ಷಿಸಿದ ಈ ಕಲೆಯು ನನ್ನಿಂದ ಇಂತಹ ಕೃತಿ ರಚನೆಗಳನ್ನು ಮಾಡಿಸಿತೆಂದರೆ ತಪ್ಪಲ್ಲ.

ಪುರಾಣೋಕ್ತವಾದ ಎಷ್ಟೋ ಕಥೆಗಳು ಇನ್ನೂ ಕೂಡ ಯಕ್ಷಗಾನ ರೂಪವನ್ನು ಹೊಂದದೆ ಹಿಂದುಳಿದಿವೆ. ಆದುದರಿಂದಲೇ ಅಂತಹ ಕಥಾ ವಸ್ತುವನ್ನಾಯ್ದು ನಾನು 'ಪ್ರಸಂಗ' ಬರೆಯುತ್ತಿರುವಾಗ ಈ ರೀತಿಯ ಇತಿಹಾಸೋಕ್ತವಾಗಿಯೂ, ಬಹು ಜನರಿಂದ ಆಚರಿಸಲ್ಪಡುವದಾಗಿಯೂ ಇರುವ 'ಭೂತಾಳಪಾಂಡ್ಯನ ಅಳಿಯಕಟ್ಟು'ನ್ನು ಯಕ್ಷಗಾನ ಕಲಾಭಿನ ಯಕ್ಕೆ ಅನುಕೂಲವಾಗುವಂತೆ ಬರೆಯಬೇಕೆಂದು ನನ್ನ ಪ್ರೀತಿಯ ಗೆಳೆಯರ ನೇಕರು, ಮುಖ್ಯವಾಗಿ ಮುಳ್ಳೆರಿಯದ ಶ್ರೀ ಯನ್. ಯಸ್. ಕೃಷ್ಣ ಭಟ್ಟರು ಪ್ರೋತ್ಸಾಹಿಸಿದುದೇ ಇದರ ರಚನೆಗೆ ಕಾರಣ.

ಈ ಕೃತಿಯಲ್ಲಿ ಸಾಮಾನ್ಯ ಆಯಾಯ ಪಾತ್ರೋಚಿತ ಭಾಷೆ ಗಳಿಂದಲೇ ಪದಗಳನ್ನು ಬರೆದಿದ್ದೇನೆ. ಅಲ್ಲದೆ ಕೆಲವೊಂದು ಹೆಸರುಗಳನ್ನು ಸಂದರ್ಭಕ್ಕನುಸಾರವಾಗಿಯೂ ಪ್ರಾಸಕ್ಕೊಪ್ಪುವಂತೆಯೂ ಸೇರಿಸಿದ್ದೇನೆ. ಆದುದರಿಂದ ಇದರಲ್ಲಿ ಉಕ್ತವಾಗಿರುವ ಹೆಸರು, ಭಾಷೆಗಳಿಗೆ ಸಹೃದಯ ವಾಚಕ ಮಹಾಶಯರು ನನ್ನಲ್ಲಿ ಖೇದಗೊಳ್ಳಬಾರದೆಂದು ವಿನೀತನಾಗಿ ವಿಜ್ಞಾಪಿಸುತ್ತೇನೆ.

ಬಾಲಭಾಷೆಯಲ್ಲಿ ಬರೆದ ಈ 'ಪ್ರಸಂಗ'ದಲ್ಲಿ ಹಲವಾರು ಲೋಪ ದೋಷಗಳಿದ್ದರೂ, ಕಲಾಸೇವೆಯೆಂಬ ಹಿರಿ ಮನಸ್ಸಿನಿಂದ ಇದನ್ನು ಪ್ರತಿ ಯೊಬ್ಬರು ಓದಿ ತೋಷಗೊಂಡರೆ ನನ್ನ ಶ್ರಮ ಸಾರ್ಥಕವಾದೀತು.

ಇದು ಎರಡು ವರ್ಷಗಳ ಹಿಂದೆಯೇ ರೂಪುಗೊಂಡಿದ್ದರೂ, ಪ್ರಕಟಿ ಸುವ ಅನುಕೂಲವೊದಗಲಿಲ್ಲ. ಈ ಸಂದರ್ಭದಲ್ಲಿ ನನ್ನ ಮಿತ್ರರಾದ

ಅಧ್ಯನಡ್ಕ ಶ್ರೀ ಕೆ. ನರಸಿಂಹ ಪೈಗಳವರು ಇದನ್ನು ಅಚ್ಚುಗೊಳಿಸುವ ಅಭಿಪ್ರಾಯದಿಂದ ನನ್ನಲ್ಲಿ ಕೇಳಿಕೊಂಡಾಗ, ಹಕ್ಕುಕೊಡುವ ಹವ್ಯಾಸಕ್ಕೆ ಹೋಗದೆ ಕೇವಲ ಪ್ರಕಟಪಡಿಸುವ ಅವರ ಉದಾರತೆಗೆ ಸಂತೋಷದಿಂದ ಒಪ್ಪಿದ್ದೇನೆ. ಆದುದರಿಂದಲೇ ಈ ಕೃತಿ ಬೆಳಕು ಕಾಣುವದಕ್ಕಾಯಿತು. ಶ್ರೀಯುತರಿಗೆ ನಾನು ಅಭಿನಂದನೆಯನ್ನು ಸಲ್ಲಿಸಲೇಬೇಕಾಗಿದೆ. ಅಲ್ಲದೆ ಇದನ್ನು ಅಂದವಾಗಿ ಮುದ್ರಿಸಿದ ಆದರ್ಶ ಪ್ರೆಸ್, ಪುತ್ತೂರು-ಇದರ ಕಾರ್ಯಕರ್ತರಿಗೂ ನನ್ನ ನೆನಕೆ ಸಲ್ಲುತ್ತದೆ.

ಈ ಪ್ರಸಂಗದ ಕಥೆಗೆ ಬೇಕಾದ ಮೂಲಾಧಾರ ಗ್ರಂಥಗಳನ್ನು ಬಹು ಶ್ರಮದಿಂದ ಒದಗಿಸಿಕೊಟ್ಟಂತಹ ನನ್ನ ಆಪ್ತ ಬಂಧುಗಳೂ, ಪ್ರಿಯರೂ ಆದ ಶ್ರೀಮಾನ್ ಯನ್. ಯಸ್. ಕೃಷ್ಣ ಭಟ್ಟ, ಮುಳ್ಳೆರಿಯ, ಇವರಿಗೆ ನನ್ನ ಹೃತ್ಪೂರ್ವಕ ವಂದನೆಯನ್ನು ಸಲ್ಲಿಸುತ್ತೇನೆ.

ಅಲ್ಲದೆ ಹಲವಾರು ಕೆಲಸಗಳಿಂದ ಬಿಡುವಿರದಿದ್ದರೂ ನನ್ನಲ್ಲಿ ಪ್ರೀತಿಯಿಟ್ಟು ಕೇಳಿಕೆಯನ್ನು ತಿರಸ್ಕರಿಸದೆ ಇದನ್ನು ಓದಿ ನೋಡಿ ಸೂಕ್ತ ಸೂಚನೆಗಳನ್ನಿತ್ತು ಈ 'ಜಯವಿಜಯ' ಯಕ್ಷಗಾನ ಮಂದಿರಕ್ಕೆ ಮುನ್ನುಡಿಯ ಕಲಶವನ್ನೊದಗಿಸಿ ಸಹಕರಿಸಿದ ಶ್ರೀ ಶ್ರೀ ವಿದ್ವಾನ್ ಕಯ್ಯಾರ ಕಿಂಞಣ್ಣ ರೈ, **M. A.,** ಇವರಿಗೆ ನನ್ನ ಕೃತಜ್ಞತೆಯನ್ನು ಸಮರ್ಪಿಸುತ್ತೇನೆ.

ಇತಿ,


ಅಂಬೇಮೂಲೆ
2-8-1964

ಎ. ಗೋವಿಂದ ಭಟ್,

ಈ ಕಥೆಯಲ್ಲಿ ಅಡಕವಾಗಿರುವ ಪಾತ್ರಗಳ ವಿವರ

1.	ಸೌಮ್ಯವೀರಪಾಂಡ್ಯ	-	ಪಾಂಡ್ಯ ದೇಶದ ರಾಜ
2.	ಸುಮತಿ ಅಥವಾ ಸುಬುದ್ಧಿ	-	,, ,, ಮಂತ್ರಿ
3.	ದೇವಪಾಂಡ್ಯ	-	ಮಧುರೆಯ ವರ್ತಕ.
4.	ನಾರಾಯಣ ಪಾಂಡ್ಯ	-	ದೇವಪಾಂಡ್ಯನ ಮಿತ್ರ.
5.	ಸತ್ಯವತಿ	-	ವೀರಪಾಂಡ್ಯನ ಪತ್ನಿ.
6.	ಶಿವದೇವಿ ಅಥವಾ ವಿಮಲೆ	-	ದೇವಪಾಂಡ್ಯನ ಮಡದಿ.
7.	ಚಂದ್ರಾಂಗದ	-	ವೇಣೂರಿನ ಅರಸ.
8.	ಕುಂಡೋದರ	-	ಭೂತರಾಜ ಅಥವಾ ಗಣ.
9.	ಸಿದ್ಧವರ್ಮ	-	ಬಾರ್ಕೂರಿನ ಭೂಪಾಲ.
10.	ಧೀಮಂತ	-	,, ಮಂತ್ರಿ.
11.	ಅಷ್ಟಭೈರವರು	-	ಸಿಂಹಾಸನದ ಕಾವಲಿನವರು.
12.	ಪರಮೇಶ್ವರ	-	
13.	ಜಯ	-	ವೀರಪಾಂಡ್ಯನ ಮಗ (ಭೂತಾಳಪಾಂಡ್ಯ).

ಚಾರಕರು, ಸಖಿಯರು, ವನಪಾಲಕರು, ಜೋಯಿಸರು,
ಪುರೋಹಿತರು, ಆಚಾರಿಗಳು, ತಂತ್ರಿಯವರು,
ಬ್ರಾಹ್ಮಣರೇ ಮೊದಲಾದವರು.



ಶ್ರೀ ಕುಲದೇವತಾ ಪ್ರಸನ್ನ

ಶ್ರೀ ಉಮಾಮಹೇಶ್ವರ ನಂದಿಕೇಶ್ವರಾಯ ನಮಃ

ಶ್ರೀ ಗಣಪತಯೇ ನಮಃ । ನಿರ್ವಿಘ್ನಮಸ್ತು ।

ಶಾರ್ದೂಲ ವಿಕ್ರೀಡಿತವೃತ್ತ

ಶ್ರೀ ಕಂಠಂ ವೃಷವಾಹನಂ ತ್ರಿನಯನಂ ಬಾಲಾರ್ಕಕೋಟಿ ಪ್ರಭಂ ಫೇಕಾರಾತಿವಿಭೂಷಣಂ ಶಶಿಧರಂ ಭಕ್ತಾನುತಾಪಕ್ಷಯಂ ॥ ಲೋಕೇಶಾ। ಪ್ರಮರೌಘ ವಂದಿತಪದಂ ಇಷ್ಟಾರ್ಥ ಸಿದ್ಧಿಪ್ರದಂ । ಶ್ರೀ ಕಾತ್ಯಾಯಿನಿವಕ್ತ್ರ ಪದ್ಮಭ್ರಮರಂ ಶ್ರೀ ನಂದಿಕೇಶಂ ಭಜೇ ॥ ೧ ॥

ರಾಗ ನಾಟ ರೂಪಕತಾಳ

ಶ್ರೀ ಗಜ ಮುಖ ನಗಜಾಸುತ । ಭೋಗ್ಯುಪವೀತ ಸುಶೋಭಿತ । ವಾಗ್ವರ ಮುಖ್ಯಾರ್ಚಿತ ಸಕ । ಲಾಗಮ ಸ್ತುತಿಪಾತ್ರ ॥ ಬಾಗುವೆ ಶಿರವನು ತವಪದ । ಕೀಗಲೆ ಮಧುಪುರ ಸುಸ್ಥಿರ । ಜೇಗನೆ ಕೊಡು ನಿರ್ವಿಘ್ನತೆ । ಶ್ರೀ ಗಣಪತಿ ನಿರತಾ ॥ ಜಯ ಜಯ ಜಯ ಜಯತೂ ॥ ೧ ॥ ವಾಣಿ ಪದ್ಮಾಸನೆ ಫಣಿ । ವೇಣಿ ಕಂಜಾಸನ ರಾಣೀ । ಕ್ಷೋಣಿ ತ್ರಯವಂದಿತೆ ವೀಣಾ । ಪಾಣಿ ಸರಸ್ವತಿಯೇ ॥ ಜಾಣೆಯೆ ನೀ ಮಮ ಜಿಹ್ವೆಯೊಳ್ । ಮಾಣದೆ ನೆಲಸಿಯೆ ಕೃತಿಯನು । ಜಾಣ್ಮೆಯೊಳ್ಪೇಳಿಸು ವಿದ್ಯಾ । ರಾಣಿ ನಮೋ ಎನುವೇ ॥ ಜಯ ಜಯ ॥ ೨ ॥ ಹರಿನುತೆ ಹರಸತಿ ಗಿರಿಸುತೆ । ಹರಿಶತದ್ಯುತಿ ಸಂಶೋಭಿತೆ । ಹರಿವಾಹನೆ ಖಳನಾಶಿತೆ । ಹರಿ ಹರಿ ಹರ ನೇತ್ರೇ ॥ ಹರಿ ಹರಸುತ ಹರಿಸಹಿತಲೆ । ವರ ಮುಂಡೋಡಲೊಳ್ ನೆಲಸಿಯೆ । ಶರಣರ ಪೊರೆವ ದುರ್ಗಾಂಬಿಕೆ । ಕರುಣಿಸು ಮಂಗಲವಾ ॥ ಜಯ ಜಯ ॥ ೩ ॥

ವಾರ್ಧಿಕ

ಸುತನ ಸಂಹರಿಸಿದನ ಸುತನ ಸಂಹರಿಸಿದನ। ಸುತಗೆ ಸುತೆಯಿತ್ತವನ ಸುತಗೆ ಸುತೆಯಿತ್ತವನ । ಸುತನಿಂದ ಅಳಿದವನ ಸುತನಿಂದ ಅಳಿದವನ ಪಿತನ ಪಿತ ಪಿತನ ಪಿತನಾ ॥ ಸತಿಯುದರಸಂಭವನ ಸತಿಯುದರ ಸಂಭವನ। ಮಥಿಸಿದವನಂ ವ್ಯಥಿಸಿದಾತನನು ಜಾತಂಗೆ । ಸತಿಯನಿತ್ತನ ಸತಿಯ ತಂದಿತ್ತನಯ್ಯನಯ್ಯನ ಪಿತನ ಪಿತಗೆರಗುವೇ ॥ ೧ ॥

ಭಾಮಿನಿ

ಎರಗುವೆನು ಹರಿ ಯಜ ಭವ ಶ್ರೀ । ಶರಜಹನುಮರ ಪದಕೆನಗವ । ರ್ಕರುಣಿಸಲಿ ಸುಖ ಮಾಯು ಭೋಗೈಶ್ವರಿಯ ಶುಭಧೈರ್ಯ ॥ ಸುರಪ ಶಿಖಿ ಯಾದ್ಯಷ್ಟದಿಕ್ಪತಿ । ಯರ ನವಗ್ರಹ ರಡಿಗೆ ನಮಿಪೆನು । ಕರುಣೆಯಲಿ ಮಮ ಕಷ್ಟದುರಿತವ ಪರಿಹರಿಸಿರೆಂದೂ ॥ ೧ ॥

ದ್ವಿಪದಿ

ಶ್ರೀ ರಾಘವೇಂದ್ರ ಭಾರತಿ ಯತೀಶ್ವರರಾ ॥ ಚಾರುಪದ ಕಭಿನಮಿಸು ತಾದಿ ಕವಿವರರಾ॥೧॥ ಬಲಗೊಂಡು ಗುರುಹಿರಿಯರಡಿಗಳನು ನೆನಮೂ॥ತಲೆ ಬಾಗು ತಾಶೀರ್ವಚನವನ್ನೆ ಪಡೆದೂ ॥ ೨ ॥ ವೀರಪಾಂಡ್ಯ ನೆನಿಪ್ಪ ಪಾಂಡ್ಯಾ ವನಿಪನೂ ॥ ಭೂರಿವರ್ತಕ ದೇವಪಾಂಡ್ಯನನುಜೆಯನೂ ॥ ೩ ॥ ವರಿಸಿ ಜಯನೆಂಬ ಕುವರನ ಪಡೆವುತರಿಗಾ ॥ ಧರೆಯಿತ್ತು ಸುಖಗ್ರಾಮದೊಳಗೆ ಸತಿಸುತರಾ ॥ ೪ ॥ ವೆರಸಿರಲು ಕುಂಡೋದರಗೆ ಬಲಿಯ ಕೊಡಲೂ ॥ ಸರಸಿಜಾಂಬಕಿ ಜಯನ ನಗ್ರಜಕೆ ಕೊಡಲೂ ॥ ೫ ॥ ತರಳನೊಳು ಕೃಪೆ ದೋರು ತಾ ಭೂತ ತುಳುವ ॥ ಧರೆಯ ಧೊರೆತನವಿತ್ತು ಮಾತುಳನ ಧನವಾ ॥ ೬ ॥ ಅಳಿಯ ಜಯನಿಗೆ ಕೊಡಿಸು ತವನಿಂದಲಿಳೆಯ ॥ ತುಳುವ ಜನರಿಂ ಗಳಿಯ ಕಟ್ಟೆಂಬ ವಿಧಿಯಾ ॥ ೭ ॥ ವಿಧಿಸಿ ಗಣನೆಲಿಗೊಳಲು ಭೂತಾಳಪಾಂಡ್ಯ ॥ ಚದುರತೆಯೊಳಿಳೆಯ ಪಾಲಿಸಿ ಮೆರೆದ ಕಥೆಯಾ ॥ ೮ ॥ ಹರುಷದಿಂದುಸುರುವೆನು ಯಕ್ಷಗಾನದಲೀ ॥ ದುರಿತಹೊದ್ದವ ತೆರವಿ ಶಿವನ ಭಜಿಸುತಲೀ ॥ ೯ ॥ ಯತಿಗಣ ಪ್ರಾಸಕೃತಿ ನಿಯಮಂಗಳರಿಯೇ ॥ ಕೃತ ದೋಷ ಪರಿಹರಿಸಿ ಮೆರೆಸು ಶ್ರೀ ಗುರುವೇ ॥ ೧೦ ॥

ವಾರ್ಧಿಕ

ವರವೆನಾಲಿಸಿರಿತ್ತ ಜಯಪಾಂಡ್ಯನೆಂಬವಂ । ಹರುಷದಿಂ ಪಾಂಡ್ಯಾವನಿಯ ನಾಳುತಿರಲವಗೆ । ತರಳರುದಿಸಿದರಗ್ನಿಕೇತು ಶಿಖಿಕೇತು ವೇಣ್ ಶೀವರ್ನ ಭೂತಪಾಂಡ್ಯ॥ ಭರಿತ ಭಕ್ತಿಯೊಳಿವರು ಶಿವಗಣಗಳೊಂದೊಂದ । ನಿರವೆ ಸಿಪ್ಪಿಸೆ ಭೂತಪಾಂಡ್ಯ ಕುಂದೋದರನ । ಪರಮ ಶಿಷ್ಯಂ ಎನಿಸಲಾ ಯ್ತಗ್ನಿಕೇತಂಗೆ ಇಳೆಯಾಧಿಪತ್ಯ ಒಳಿಕ ॥ ೧ ॥ ಚಿರಕಾಲವಾನೃಪಂ ಸದ್ವರ್ನದಿಂವಾಳಿ । ಸರಸಿಜಾಪ್ತಜನ ಪುರಸೇರಲವನೌವರಸದ । ತರಳನಾಗಿಹ ಸೌವ್ಯ ವೀರಂಗೆ ಪಟ್ಟಾಭಿಷೇಕವಮಂ ವಿಧಿಯುಕ್ತದೀ ॥ ವಿರಚಿಸಲ್ಕಿವನಿರಿತು ವೇಣೂರು ಪಟ್ಟಣದ । ಧೊರೆಯು ಚಂದ್ರಾಂಗದಂ ಬಲವೆರಸಿ ಧುರ ಕೊವಗ । ಉರುಪರಾಕ್ರಮದಿಂದಲವನ ಸೋಲಿಸಿ ವೀರಪಾಂಡ್ಯ ತಾ ಪೊರೆದಿರ್ದನೂ ॥ ೨ ॥

ಭಾಮಿನಿ

ಒಂದು ದಿನ ವೀರಾಖ್ಯ ಭೂಮಿಪ । ವಂದಿ ಮಾಗದ ಸೂತಸಂದಣಿ । ಬಂದಲಿಂದ್ರನಸಭೆಯುವೊಡ್ಡೋಲಗಕೆ ನಡೆತಂದೂ ॥ ಮುಂದೆಸೆವ ವರ ಸಿಂಹ ಪೀಠದಿ । ನುಂದಿ ಜಯವೆನಲೀರ್ದು ಬಹಳಾ । ನಂದದಿಂ ತನ್ನಾಪ್ತ ಸಚಿವ ಸುಬುದ್ಧಿಯೊಡನೆಂದಾ ॥ ೧ ॥

ರಾಗ ಭೈರವಿ - ಝಂಪೆ ತಾಳ

ರಾಜತಂತ್ರಜ್ಞ ಸುರ । ರಾಜ ಸಚಿವಸಮಾನ । ರಾಜಿಸಿತು ಯಶವ್ರನಿ । ಸ್ನೋಜೆಯಿಂದೆನಗೇ ॥ ೧ ॥ ವೈರವಿಡಿದೈತಂದ । ದುರುಳ ಚಂದ್ರಾಂಗದನ । ಘುರದಿಸಿಂಶೋಡಿಸಿದೆ । ಹರಸೊಲುಮೆಯಿಂದಾ ॥ ೨ ॥ ಪ್ರಜೆಗಳ್ಂತಿಹರೆಂದು । ರುಜುಪಡಿಸಿಕೊಂಡಿಹೆಯ । ಕುಜನರುಪಟಳವಿರಲು । ನಿಜದೊಳರುಹೆನಗೇ ॥ ೩ ॥ ಇನಿತು ಮಾತಾಡುತಿರ । ಲನಿತರೊಳಗೈತಂದು । ವನಪಾಲರೆಂದರಾ । ಜನಪಾಲಗಂದೂ ॥ ೪ ॥

ರಾಗ ಮುಖಾರಿ - ಏಕ ತಾಳ

ಮಾಡ್ತೇವ್ ಸಲಾಂ ಸಾಮಿಯರಡಿಗೇ । ಭಯಗೊಂಡ್ತೀಗೆ । ಓಡೋಡಿ ಬಂದೆವ್ ಪಾದಪಡಿಗೇ ॥ ಪಲ್ಲ ॥ ನಾಡುವಾತಲ್ಲಾನಿಮ್ಮುಡಿಪೇಗೇ ।

ವನಕಾಯ್ತಾಗೇ । ಆಡಾಲೀನೊಡೆಯು ಕೇಳಾಕಡೆಗೇ । ಕಾಡಾನೆಯು ಹರಿ । ಜೋಡು ಕಡಿ ಪುಲಿ । ಕಾಡ್ಕೋಣವು ವೃಕ । ಕ್ರೋಡಗಳಿರೆ ಖಗ । ಕೋಡಗ ಜಂಬುಕ । ಕೂಡಿಕೊಂಡೈದು । ತ್ತಾಡುಂ ಜೊಲವನು । ಕೇಡೆಸಗಿದವೂ ॥ ಮಾಡ್ತೀ ॥ ೧ ॥ ರಂಬಾ ಖರ್ಜೂರ ಪೂಗ ಪನಸಾ । ದಾಡಿಮ ಬಕುಳ । ಜಂಭೂನೀರಳೆ ಕೇತಕಿ ಮರವಾ ॥ ನಿಂಬೆಯು ದ್ರಾಕ್ಷೆದಾಳಿಂಬೆಯು ಮಾದಳೆ । ಯಂಬುಜ ಸುಮನಿಕು । ರುಂಬವ ಮಿಗತತಿ । ತಿಂಬುತ ಕೆಡಿಸುತ । ಲಿಂಬುಗೊಂಡಿಹವೇ । ನೆಂಜೆವು ನಮ್ಮೊರೆ । ನಂಬಿಕೊ ಧಿಟವಿದು ॥ ಮಾಡ್ತೀ ॥ ೨ ॥

ಭಾಮಿನಿ

ಮೊರೆಯನಾಲಿಸಿ ಭೂಪನಭಯವ । ಚರರಿಗೀವುತ ಸಚಿವ ಸುಮತಿಯೊ । ಳಿರಿಸಿ ಪುರದಧಿಕಾರವನು ಬಲು ಶಬರತಿಂಥಿಣಿಯಾ ॥ ಕರೆಸಲಾಕ್ಷಣ ಬಂದು ಪಾದ । ಕ್ಕೆರಗಲೀಹದನೊರೆವುತವರ । ನ್ನಿರದೆ ಜತೆಗೊಳುತಾಗ ವನಕೈತಂದ ಸಂಭ್ರಮದೀ ॥ ೧ ॥

ರಾಗ ಮುಖಾರಿ - ಏಕ ತಾಳ

ಬಂದಾವೀರಾಖ್ಯ ಬೇಟೆಗೆನುತಾ । ಶಬರರ ಸಹಿತ । ನಂದನವೆಡೆಗೆ ತಾ ಗಜರುತ್ತ ॥ ಚಂದದುದ್ಯಾನವ । ಹೊಂದಿಹ ಮಿಗಖಗ । ಸಂದಣಿಯನು ಕಂ । ಡೆಂದನು ಭರದೀ ॥ ಬಂದಾ ವೀರಾಖ್ಯ ॥ ೧ ॥ ಅದಕೋ ಕದಳಿ ವನವ ಕಿಟಿಯೂ । ಜಂಭುಕವು ಮ । ತ್ತದಕೋ ಕಬ್ಬಿನ ಬನವಿ ಕರಿಯೂ ॥ ಪದುಮಾಕರವನು । ಕದಡುತ ಕಪಿಗಳು । ಪುದುರಿಸು ತೀರ್ಪವು । ವಿಧ ವಿಧ ಫಲಗಳ ॥ ಬಂದಾವೀರಾಖ್ಯ ॥ ೨ ॥ ಹಿಡಿರೀ ಹೊಡಿರಿ ಎನುತ ಲಾಗಾ । ಆಯುಧ ಧರಿಸು । ತ್ತೊಡನೇ ಕೈರಾತನಿವಹ ಬೇಗಾ ॥ ಬಿಡದೆ ಖಗಂಗಳ । ಪಿಡಿವುತ ಬಲೆಯೊಳು । ಕೆಡಹುತ ಮೃಗಗಳ ಕಡುಹಿಂದೋಡಿಸಿ ॥ ಬಂದಾ ॥ ೩ ॥

ವಾರ್ಧಿಕ

ಇಂತು ಮೃಗನಿಕರಮಂ ವನದಿಂದಲೋಡಿಸುತ । ಮುಂತೆ ಬರುತೊಂದು ನದಿಯಲಿ ಕಾಲು ಪದನಂಗ । ಳಂತೊಳೆದು ಕೂಲದೊಳಗಿಹ

ವೃಕ್ಷನಡಿಸೇಳಲೊಳಾ ಭೂಪ ಕುಳ್ಳಿರ್ದನೂ ॥ ಎಂತಃ ಬಣ್ಣಿಪೆ ತತ್ಪುರದ ದೇವಪಾಂಡ್ಯ ಧನ । ವಂತನನುಜೆಯು ತನ್ನ ಗೆಳತಿಯರ ಕೂಡುತ । ತ್ಯಂತ ವಿಭವದೊಳಾಗ ಸ್ನಾನಕೆಂದಾಯೆಡೆಗೆ ಬರಲವಳತನುಕಾಂತಿಯೂ ॥ ೧ ॥

ಕಂದ ಪದ್ಯ

ಜನಪನ ನೇತ್ರವ ನಸೆಳೆ । ವಿನಯದೊಳೀಕ್ಷಿಸುತಾಕೆಯ ತನು ಸೌರಭವುಂ ॥ ಮನುಮಥ ಗಂಗವನಿತ್ತಾ । ವನಿಪತಿ ಪೇಳ್ದನು ತನ್ನೊಳು ತಾನಿಂತೆನುತಂ ॥ ೧ ॥

ರಾಗ ಕಾಪಿ - ಅಷ್ಟತಾಳ

ಯಾರಿವಳು ಶೃಂಗಾರಿ ಕೋಮಲೆಯೂ । ತ್ರೈಭುವನ ಮೋಹಿನಿ । ಮಾರನರಗಿಣಿ ಕೀರ ಭಾಷಿಣಿಯೂ ॥ ಭಾರಿ ಸೊಬಗ ವಿ । ಚಾರಿಸಲ್ಕೀ । ನಾರಿಯರನೊಡ । ಸೇರಿ ವಿಹರಿಪೆ । ಸಾರಿ ಬಂದಿಹ । ಊರ್ವಶಿ ಮೇ । ಣಾರು ರಂಭೆಯೆ । ತೋರದಾಯ್ತಲೆ ॥ ಯಾರಿವಳು ॥ ೧ ॥ ನಳಿನಗಂಧಿನಿ । ನಳಿನದಳನಯನೇ । ಕರಿನಡೆಯ ಶೋಕಾ । ಪೆಲರ ತುಟಿ ನಳಿತೋ । ಳ್ನಳಿನ ವದನೇ ॥ ಪಲ್ಲುಕುಂದರ । ಸಾಲ ತಳಿರಡಿ । ಚಲುವ ಮೊಲೆಯು । ತ್ಪಲದ ಮುಗುಳಿನೆ । ಫುಲ್ಲಶರವಿವ । ಳಲ್ಲಿ ನೆಲಸಿರ । ಲಿಲ್ಲ ಪೂರ್ಣ್ವಂ । ಶಿಲ್ಲಿ ಸೋತೆನು ॥ ಯಾರಿವಳು ॥ ೨ ॥

ಭಾಮಿನಿ

ಘೋರ ತಪವನು ಮಾಳ್ಪಯಮಿಗಳೆ । ಮಾರನಸ್ತ್ರಕೆ ಸೋತರೆಂದೆನೆ । ಚಾರುಘೃತ ಶಾಲ್ಯಾನ್ನ ಮೆಲುವೆಮ್ಮವರದೇನ್ ಘನವೇ ॥ ತೋರಿದನು ನಾಲ್ಕಿರದೊಳಬುಜಜ । ನೀರೆಯೊಕೆಯ ನಿರ್ಮಿಸಲುಧಿಟ । ವಾರಿಜಾಕ್ಷಿಯ ನುಡಿಸುತೊಲಿಸುವೆನೆನುತ ಬಳಿಗಯ್ದಿ ॥ ೧ ॥

ರಾಗ ಕಲ್ಯಾಣಿ - ತ್ರಿವುಡೆ ತಾಳ

ಯಾರೇ ನೀ ನಾಗವೇಣೀ । ಕೋಕಿಲವಾಣೀ ॥ ಯಾರೇ ನೀ ನಾಗ ವೇಣೀ ॥ ಚಾರುಮಂಗಳಗಾತ್ರೆ ತವಪಿತ । ನ್ಯಾರು ಗೇಹವದೆಲ್ಲಿ ಬಂದಿಹ ।

ಕಾರಣವದೇನರುಹುತನ್ನೊಳು । ಸಾರಸಾಕ್ಷಿ ಮದೇಭಗಾಮಿನಿ ॥ ಯಾರೇ ॥ ೧ ॥

ರಾಗ ಹನುಮತೋಡಿ - ಅಷ್ಟತಾಳ

ಯಾರಯ್ಯ ನೀನಿತ್ತ ಬಂದೂ । ಪರ । ನಾರಿಯೆಂಬುದ ಮರೆತಿಂದೂ ॥ ಈ ರೀತಿ ಎನ್ನ ವಿ । ಚಾರಮಾಡುವ ನಿನ್ನ । ಪೂರಾವುದಾರೆಂದು । ವಾರಂತ ರುಹುಮುನ್ನ ॥ ೧ ॥

ರಾಗ ಕಲ್ಯಾಣಿ - ತ್ರಿವುಡೆ ತಾಳ

ಚದುರೆ ಕೇಳವನಿಪಾಂಡ್ಯ । ಪಾಲಿಸುವ ಭೂ । ಪಧುಪತಿ ವೀರ ಪಾಂಡ್ಯ ॥ ವಿಧವಿಧದ ಮೃಗಕುಲವ ವನದಿಂ । ಚದರಿಸುತಲೈತಂದು ದೇಹ । ಕ್ಕೊದಗಿರುವ ದಣು ಹರಿಸಲೆನುತಲಿ । ವಿದುವದನೆ ನಾ ಕುಳಿತೆನಿದು ಖರೆ ॥ ೧ ॥

ರಾಗ ಹನುಮತೋಡಿ - ಅಷ್ಟತಾಳ

ಪತ್ತನ ಮಧುರೆಯಾ ಪಾಂಡ್ಯ । ಕುಲ । ವುತ್ಪನ್ನ ಕೇಶವ ಪಾಂಡ್ಯ ॥ ಪೆತ್ತಿಹಪಿತ ಸತ್ಯ । ವತಿಯೆಂಬುದಭಿದಾನ । ಮತ್ತೆ ಕೇಳ್ ನೀರಾಟ । ಕಿತ್ತ ಬಂದಿಹೆ ನಾನು ॥ ೧ ॥

ರಾಗ ಕೇದಾರ ಗೌಳ - ಝಂಪೆ ತಾಳ

ಬಡ ನಡುವಿನಬಲೆ ಕೇಳೇ । ಪೇಳ್ವನುಡಿ । ಕಡು ಚೆಲುವೆ ಕೊಡ ಮೊಲೆಯುಳೇ ॥ ಹುಡುಗಿ ನಿನ್ನಯ ಬೆಡಗನೂ । ಕಂಡೆನಗೆ । ಹೊಡೆವ ಶರ ಕಂದರ್ಪನೂ ॥ ೧ ॥ ಮಾನವಾಧಿಪನೆ ನೀನೂ । ಈ ತೆರದ । ಹೀನನುಡಿ ಕೇಳ್ವುದೇನೂ ॥ ನಾನೇನಗೈವೆನವಕೇ । ವಾದಿಸದೆ । ನೀನೈದು ತವನಿಲಯಕೇ ॥ ೨ ॥ ಮಾರಶರಗರಳದುರಿಯಾ । ಶಮಿಸುವಡೆ । ಚಾರುಸುಧೆಯೊರ್ಪುದರಿಯಾ ॥ ನಾರಿ ನಿನ್ನಧರಾಮೃತಾ । ಕೊಟ್ಟೆನ್ನ । ಸೇರಿಸುಖಿಮೀಯೆ ನಿರತಾ ॥ ೩ ॥ ಸರಿಯಹುದೆ ನಿನ್ನ ಮತವೂ । ಸ್ವಾತಂತ್ರ್ಯ । ವಿರದಣ್ಣ ದೇವನನುಮೂ ॥ ಹರುಷದಿಂ ಪಡೆಯೆ ನಿನ್ನಾ । ವಿಧಿಯಂತೆ । ವರಿಸಿ ಸತಿಯಹೆ ನಿರ್ಣಯಾ ॥ ೪ ॥

ಭಾಮಿನಿ

ತರುಣಿ ಈ ಪರಿಯೊಪ್ಪಿ ಮಜ್ಜನ । ವಿರಚಿಸುತ ಸಖಿಜನದೊಡನೆ ತಾ । ತೆರಳೆ ಭೂಮಿಪ ಯೋಚಿಸುತಲೊಂದೋಲೆಯನು ಬರೆದೂ ॥ ಚರ ನೋಳೀವುತ ದೇವಪಾಂಡ್ಯಗೆ । ಭರದೊಳೊಪ್ಪಿಸಿ ಬಾರೆನಲು ಕೆ - ೞ್ಬರದೆ ಪೋಗಲ್ಕಿತ್ತ ಪಾಂಡ್ಯನು ತನ್ನ ಪುರದೊಳಗೇ ॥ ೧ ॥

ರಾಗ ಕಾಂಬೋದಿ - ಝಂಪೆ ತಾಳ

ಮಿತ್ರ ನಾರಾಯಣನ । ಹತ್ತಿರಕೆ ಕರೆದು ನೀ । ವರ್ತಕಾಗ್ರಣಿ ಬಹಳ ಚತುರಾ ॥ ಉತ್ತಮದ ವಾಣಿಜ್ಯ । ವೃತ್ತಿಯಲಿ ಬಹಳ ಸಂ । ಪತ್ತು ದೊರಕಿತು ಹರನ ದಯದೀ ॥ ೧ ॥ ಹಡಗದಲಿ ಸರಕುಗಳ । ನೊಡಗೂಡಿ ತುಂಬಿಕೊಂ । ಡೊಡನೆ ಬಹು ದೇಶದೇಶಗಳಾ ॥ ಬಿಡದೆ ಚರಿಸುತಲಿ ಸಂ । ಗಡ ಬಹಳ ದ್ರವ್ಯವನು । ಪಡೆದು ಬಂದಿಹ ನೀನೆ ಸಖನೂ ॥ ೨ ॥ ನಿನ್ನ ಪೋಲ್ವಾಪ್ತರಾ । ರಿನ್ನು ಪೇಳ್ ಕೆಂಪು ಕಡ । ಲನ್ನುತ್ತರಿಸುತ ಲೀಜಿಪ್ಟ ॥ ಉನ್ನತದ ನಗರದೊಳು । ಚೆನ್ನಾಗಿ ವ್ಯಾಪಾರ । ವನ್ನು ಮಾಡಲು ಬೇಕೆನುತ್ತ ॥ ೩ ॥ ಮಾತಾಡುತಿರಲಂದು । ದೂತ ತಾನೈದು । ತಾ ತವಕದಿಂ ಪತ್ರವೀಯೆ ॥ ಭೂತಳಾಧಿಪನೋಲೆ । ಏತಕಿಲ್ಲಿಗೆ ಬಂತು । ನೂತನವಿದೆನುತ ವಾಚಿಸಿದಾ ॥ ೪ ॥

ರಾಗ ಕೇದಾರಗೌಳ - ಅಷ್ಟ ತಾಳ

ವರ್ತಕರುಡುಗಣಪೂರ್ಣೇಂದು ಮಿತ್ರಾಬ್ಜ । ಮಿತ್ರನಾಗಿಯೆ ಧನದೀ ॥ ವಿತ್ತಪನೊಲ್ ಮಧುರಾಪುರದೊಳು ಮೆರೆ । ಯುತ್ತಿಹ ದೇವ ಪಾಂಡ್ಯನಿಗೆ ॥ ೧ ॥ ಪೃಥ್ವಿಯೊಳ್ ಪೆಸರಾಂತು ರಾಜಿಪ ಪಾಂಡ್ಯ ಧರಿತ್ರಿ ಗೊಡೆಯನಾಗಿಹ ॥ ಉತ್ತಮ ಸೌಮ್ಯ ವೀರಾಖ್ಯನಾ ಬರೆದಿಹ । ಪತ್ರನಾವ್ ಕ್ಷೇಮಿಗಳು ॥ ೨ ॥ ನಂದನ ಕೆಡಿಸುವ ಮೃಗಗಳನೋಡಿಸಿ । ಬಂದಿಲ್ಲಿ ವಿಶ್ರಮಿಸೇ ॥ ಚಂದಿರಮುಖಿ ತವಸಹಜಾತೆ ಗೆಳತಿಯ । ರೊಂದಿಗಾಗಮಿಸಲಿತ್ತ ॥ ೩ ॥ ಮಂದಗಾಮಿನಿಯಳ ಸೊಬಗನೀಕ್ಷಿಸಿ ಮನ । ಹೊಂದೀರ್ಪುದಾಕೆಯೊಳು ॥ ಚಂದದಿಂ ವೈವಾಹವೆಸಗುತ್ತಲೆನಗೀಯೆ । ಮುಂದಭ್ಯುದಯುವಪ್ಪುದು ॥ ೪ ॥ ಇನಿತೀರ್ಪ ಲಿಖಿತವನೋದಿ ಕೋಪದಿ ಸಖನನು

ಮತಿಯಂತೆ ಜೇಗ ॥ ಅನುಜೆಯು ಬರಿಸುತಾಕೆಯು ಮನದೊಲವನು । ವಿನ ಯದೊಳರಿತಾಗಲೂ ॥ ೫ ॥

ಕಂದ ಪದ್ಯ

ಸಡಗರದಿಂ ತನ್ನಾಪ್ತರ।ನೊಡಗೊಂಡೈದುತ್ತಲಿ ನೃಪತಿಲಕನ ಬಳಿಗಂ॥ ಒಡನೆಯೆ ಕರೆತಂದಾತನ । ಬೆಡಗನೊಳುಪಚರಿಸಿದನಾ ಪುರದೊಳು ಪಾಂಡ್ಯಂ ॥ ೧ ॥

ವಾರ್ಧಿಕ

ಬಳಿಕ ಲಗ್ನವತಿ ಳಿದು ಪಟ್ಟಣವ ಶೃಂಗರಿಸಿ । ತಿಳುಹಿ ಸಚಿವಾಪ್ತರಂ ಬರಿಸಿ ದಿಬ್ಬಣ ಸಹಿತ । ಜಲಜಾಕ್ಷಿಯಂ ಸೌಮ್ಯವೀರಂಗೆ ವಿಧ್ಯುಕ್ತದಿಂದ ವೈವಾಹವೆಸಗೀ ॥ ಇಳೆಯುಮರರಂ ತೃಪ್ತಿಪಡಿಸಿ ವಧುವರರನುಂ । ಪೊಳ ಲೊಳೆಗೆ ಬಹಳ ದಿನ ವುಪಚರಿಸುತವರಿಂಗೆ । ಬಳುವಳಿಯನಿತ್ತು ಕಳುಹಲ್ಕ ವನಿಪಂ ತನ್ನ ಸತಿಯೊಡನೆ ಪುರಕೈದುತಾ ॥ ೧ ॥

ರಾಗ ಸಾಂಗತ್ಯ - ರೂಪಕ ತಾಳ

ತರುಣಿಯನೊಡಗೂಡಿ । ಹರುಷದಿಂ ವೀರಾಖ್ಯ । ಧರೆಯು ಪಾಲಿಸು ತಿರಲಿಂತೂ । ತೆರಳಲೊಂವಬ್ಧವಾ । ಧರಣಿಪನರಸಿ ತಾ । ಧರಿಸಲು ಗರ್ಭವ ತಿಳಿದೂ ॥ ೧ ॥ ಮಾಸವೇಳಾಗಲು । ಭೂಸುರೋತ್ತಮರಿಂದ । ಲೇಸಾಗಿ ಸೀಮಂತ ರಚಿಸೀ ॥ ಆ ಸತ್ಯವತಿ ಮನ । ದಾಸೆಯು ಸಲಿಸಿ ಸಂ । ತೋಷ ದಿಂದಿರಲಾಸುವ್ರತೆಯೂ ॥ ೨ ॥ ನವ ಮಾಸ ಕಳೆದೊಂದು । ದಿವಸ ಶ್ರಾ ಪಡೆದಳು । ಕುವರನೋರುವನನೆಂಬುದನೂ ॥ ತವಕದಿಂದೈ ತಂದು । ವಿವ ರಿಸೆ ಸಖಿಯರಂ । ದವನಿಪಾಲಕ ಮುದವಾಂತೂ ॥ ೩ ॥

ಕಂದ ಪದ್ಯ

ತರಳನ ಜನನ ಶುಭಾಶುಭ । ವರಿಯಲು ಬೇಕೆನುತಲಿ ಕರೆಸುತ ಜೋಯಿಸರಂ ॥ ಹರುಷದಿ ಬೆಸಗೊಳಿಗುಣಿಸುತ । ಲೊರೆದರು ಭೂಮಿಪ ನೊಡನೀ ತೆರದಿಂದಾಗಲ್ ॥ ೧ ॥

ರಾಗ ಕೇದಾರಗೌಳ . ಅಷ್ಟತಾಳ

ಇನ ಚಂದ್ರಾಂಗಾರಕ ಬುಧ ಗುರು ಭಾರ್ಗವ । ಶನಿ ರಾಹು ಕೇತು ನಮಃ ॥ ಜನುಮ ತಾರೆಯು ಮೂಲ ಪರಿಗಣಿಸಿದಡದು । ಧನುರಾಶಿಯು ಸುರಗಣಾ ॥ ೧ ॥ ಶಿಷ್ಟದೆಶೆಯು ಕೇತು ಕುಜ ದೃಷ್ಟಿಯುದರಿಂದ । ಕಷ್ಟ ನಿಸ್ಸೆಯು ಬಾಲಗೇ ॥ ಸೃಷ್ಟಿಪ ಕೇಳ್ ಪಂಚಮದೊಳಿಹ ರವಿ ನಿನ । ಗಿಷ್ಟ ವಲ್ಲವು ಯೋಚಿಸೆ ॥ ೨ ॥ ಅಚ್ಯುತಸಖನೊಲುಮೆಗೆ ಪೂಜೆ ಹೋಮವ । ನಿಚ್ಚಟವೊಳಗೆಸಗೀ ॥ ಹೆಚ್ಚೇನು ದ್ವಿಜರೀಗೆ ದಾನ ದಕ್ಷಿಣೆ ಯಿೞವು । ತಿಚ್ಛೆ ಸಲಿಸೆ ಮುಂದಕೇ ॥ ೩ ॥ ಯಿಪ್ಪದು ಶುಭಯೋಗ ಪದಿನಾಲ್ಕಬ್ಧವು ಸುತ । ಗಪ್ಪಾಗ ಭೂಭುಜರಾ ॥ ದರ್ಪ ಮುರಿದು ಧೊರೆಯಾಗಿ ಕೀರ್ತಿಯೊಳಪ್ಪ । ತಪ್ಪದು ಧಿಟವಿದಯ್ಯ ॥ ೪ ॥

ವಾರ್ಧಿಕ

ಇನಿತೆಂದ ಜೋಯಿಸರ ಬೀಳ್ಕೊಟ್ಟು ವೀರಾಖ್ಯ । ಮನದಿ ಚಿಂತೆಯ ತಾಳಿ ಮನುಮಥಾರಿಯ ನೆನೆದು । ಜನಿಸಿದರ್ಭಕನಿಂಗೆ ಪನ್ನೊಂದನೆಯ ದಿನದಿ ಜಾತಕರ್ಮವ ವಿರಚಿಸೀ ॥ ವಿನಯದಿಂ ಜಯನೆಂಬ ಪೆಸರಿರಿಸುತೆಲ್ಲ ವರ । ಮನದಿಷ್ಟಮಂ ಸಲಿಸಿ ಮರುದಿವಸ ನಿಶಿಯೊಳಾ । ತನ ರತುನ ತೊಟ್ಟಿಲೊಳಗಿಟ್ಟು ತೂಗುತ ಪಾಡಿದರ್ ಚಲುವ ಕೋಮಲೆಯರೂ ॥ ೧ ॥

ರಾಗ ಬಿಲಹರಿ - ಅಷ್ಟ ತಾಳ

ಜೋ ಜೋ ಮುದ್ದು ಕುಮಾರ ಪ್ರವೀಣಾ । ಜೋ ಜೋ ಪಾಂಡ್ಯ ಕುಲೋದ್ಧಾರಿ ಸುಗುಣ ॥ ಜೋ ಜೋ ದಿನಕರ ತೇಜ ಸಂಪೂರ್ಣ ॥ ಜೋ ಜೋ ಶತಪತ್ರ ಸರಳ ಲಾವಣ್ಯ ॥ ಜೋ ಜೋ ॥ ೧ ॥ ಪೃಥ್ವಿಪ ಸೌಮ್ಯ ವೀರನ ಕಂದ ಜೋ ಜೋ ॥ ಸತ್ಯವತೀಯುದರಾಬ್ಧೀಂದು ಜೋ ಜೋ । ಸತ್ಯ ಸತ್ಕೀರ್ತಿಯಿಂದಿರು ಮುಂದೆ ಜೋ ಜೋ ॥ ಮೃತ್ಯುಂಜಯನು ನಿನ್ನ ಸಲಹಲಿ ಜೋ ಜೋ ॥ ಜೋಽಜೋ ॥ ೨ ॥

ರಾಗ ಸಾಂಗತ್ಯ - ರೂಪಕ ತಾಳ

ನೀಲಾಳಕಿಯರು ಜೋ । ಗುಳವನು ಪಾಡಿ ತ । ನ್ಮಾಲಯವನು ಸೇರಲಿತ್ತಾ ॥ ಭೂಲೋಲ ನರಮನೆಯೊಳು ಚಲ್ವಕುವರ ಸ । ಲ್ಲೀಲೆಯಿಂಬೆಳೆ

ಪುತ್ರಲೀರ್ದ ॥ ೧ ॥ ದೀರ್ಘಾಯು ತರಳನಿಗಾಗಲೆನ್ನುತಲಿ ಸ । ನ್ಮಾರ್ಗಿ ಭೂಸುರರಿಂದ ಯಜ್ಞ ॥ ಶೀಘ್ರದಿಂ ವಿರಚಿಸಲಾಗವೋಕ್ತದಿ ದ್ವಿಜ । ವರ್ಗ ವೀಕ್ಷಿಸಿ ಪುರೋಹಿತನೂ ॥ ೨ ॥ ಗೋಧಿ ಕೃಷ್ಣನಿಗೆಣ್ಣೆ । ಮಾಧವನಿಗೆ ದೊಡ್ಡ । ಬೂದಿ ಕುಂಬಳ ನಂಬೂದಿರಿಗೇ ॥ ಮೇಧಿನಿಯನು ನಮ್ಮ । ಸೋದರ ಭಾವಂಗೆ । ಗೋದಾನವೆಮ್ಮ ಮಾತುಳಗೇ ॥ ೩ ॥ ತುಪ್ಪಶಂಕಣ್ಣನಿ । ಗುಪ್ಪು ಕುಪ್ಪೆಯ ಭಟ್ಟ । ಗೊಪ್ಪುವ ಹತ್ತಿ ಜೋಯಿಸಗೇ ॥ ಯಿಪ್ಪ ಸ್ವರ್ಣದ ರಾಶಿ । ತಪ್ಪದೆ ನಮಗೀಯ । ಲಪ್ಪುದು ನಿಮಗಿನ್ನು ಶುಭವೂ ॥ ೪ ॥

ಭಾಮಿನಿ

ಇಂತು ಪೌರೋಹಿತ್ಯರುರೆ ಪೇ । ಳ್ದಂತೆ ದಾನವನಿತ್ತು ದ್ವಿಜರಿಗೆ । ಸಂತಸವ ಪಡಿಸುತ್ತ ಕಳುಹಿದನಧಿಕ ಸಂಭ್ರಮದೀ ॥ ಕಂತು ಹರನನು ನೆನೆಯುತಲಿ ಭೂ । ಕಾಂತ ಸತಿಸುತ ಸಚಿವ ಸಹ ಸಾ । ಮಂತರೊಡನತಿ ವಿಭವದಿಂದಿರೆ ಕಳೆದು ದೈದಭುದ ॥ ೧ ॥

ರಾಗ ಕಾಂಬೋದಿ - ಝುಂಪೆ ತಾಳ

ಇತ್ತಲಿಂತಿರುತಿರಲಿ । ಕತ್ತ ವೇಣೂರಿನೊಳು । ಪೃಥ್ವಿಪತಿ ಚಂದ್ರಾಂಗದಾಖ್ಯ ॥ ಯಿತ್ತೋಲಗವನು ತ । ನ್ನಾಪ್ತ ಪ್ರಧಾನನಿಗೆ । ಬಿತ್ತರಿಸಿದನು ಮನದ ದುಗುಡಾ ॥ ೧ ॥ ಕೇಳಯ್ಯ ಸಚಿವ ಭೂ । ಪಾಲ ವೀರಾಖ್ಯನೊಳು । ಸೋಲವ್ಯಾತ್ತೆರಡು ಸಲ ಘುರದೀ ॥ ಚೋಳ ತುಳು ಕೇರಳವ । ನಾಳ್ತನದಿ ಗೆದ್ದ ಯಶ । ಹಾಳಾಗುವಂತಾಯಿತೇನೈ ॥ ೨ ॥ ವೀರಪಾಂಡ್ಯನ ಮಂತ್ರಿ । ಶೂರ ಸುಮತಿಯೊಳು ಜಯ । ಸೇರಲರಿದಿನ್ನವರ ಗೆಲುವಾ ॥ ದಾರಿ ಯಾವುದೆನುತ್ತ । ಭೂರಮಣ ಕೇಳುತಿರೆ । ಚಾರಕರು ಮಣಿದೆಂದರಿಂತೂ ॥ ೩ ॥

ರಾಗ ಮುಖಾರಿ - ಏಕ ತಾಳ

ನುಡಿಯಾನಾಲಿಸಬೇಕೆಂಬುದ್ಧಿ । ಧಿಟವೀ ಸುದ್ದಿ । ನುಡಿಯಾನಾಲಿಸಬೇಕೆಂಬುದ್ದಿ ॥ ಒಡೆಯನ ಕೆಲಸವ । ಬಿಡದಾಚರಿಸುವ । ಬಡವರು ನಾವೆಡೆ । ಬಿಡದಾ ಪಾಂಡ್ಯನ । ಪೊಡವಿಯೊಳರಿಯದ । ಬೆಡಗಿನ ವೇಷದೊ । ಳಡಗಿ ರಲರಿತಿಹು । ದೊಡನುಸುರುವೆವೂ ॥ ನುಡಿಯಾ ॥ ೧ ॥ ಪೃಥ್ವೀಪ ಸೌಮ್ಯ

ವೀರನೆಡೆಗೇ । ಸಹಾಯುದ ಬಗೆಗೆ । ಪತ್ರ್ರವನೀಯೆ ಕಂಚೀಧೊರೆಗೇ॥ ಮಿತ್ರ ತ್ವದಿ ತ । ನ್ನಾಪ್ತ ಸಚಿವನೊಡ । ಪತ್ರಿಯೊಳರ್ಥವ । ನಿತ್ತು ಸಹಾಯು । ಕೃರ್ಥಿಯೊಳ್ಕಳುಹಿದ । ವರ್ತಮಾನವ ತಿಳಿ । ವೃತ್ತೈತಂದಿವು । ಬಿತ್ತರಿಸು ವೊಡಿದ ॥ ನುಡಿಯಾ ॥ ೨ ॥

ವಾರ್ಧಿಕ

ಚಾರಕರನುಡಿಕೇಳ್ದು ಚಂದ್ರಾಂಗದಾಖ್ಯ ತಾ । ವೀರಪಾಂಡ್ಯನ ಗೆಲುವಡಿದು ಸಮಯವೆಂದೆನುತ । ಭೂರಿತೋಷದಿ ಸಚಿವಗರುಹಿ ವಾಹಿನಿ ಸಹಿತ ಭರದಿಂದ ಪೊರಟು ಬಂದೂ ॥ ವೀರಪಾಂಡ್ಯೇಶ್ವರನ ಪುರವ ಮುತ್ತಲ್ಕ ರಿತು । ಧಾರಿಣಿಪ ಮಂತ್ರಿಯಿಲ್ಲದಕಾಗಿ ಮನಮರುಗು । ತೋರಂತೆ ಸೇನಾನಿ ಯೊಡನುಳಿದ ಸೈನ್ಯದಿಂ ಪ್ರತಿಭಟರನಿದಿರಿಸಿದನೂ ॥ ೧ ॥

ಕಂದ ಪದ್ಯ

ಬತ್ತೀಸಾಯುಧದಿಂದಲಿ । ಇತ್ತಂಡದ ಪಟುಭಟರೆಚ್ಚಾಡುತಲಿರಲುಂ॥ ಪೃಥ್ವಿಪ ಚಂದ್ರಾಂಗದನನು । ಸತ್ವದಿ ತಡೆಯುತ ವೀರಾಖ್ಯನು ತಾ ಪೇಳ್ದಂ ॥ ೧ ॥

ರಾಗ ಭೈರವಿ - ಅಷ್ಟ ತಾಳ

ಎಲವೋ ಚಂದ್ರಾಂಗದನೇ । ಎನ್ನೊಳು ಕೊಳು । ಗುಳಕತಿ ಸೇನೆ ಯನೇ ॥ ಘಳಿಲನೆ ನೆರಹಿಕೊಂ । ಡಳಿಯಾಸೆಯಿಂ ಬರು । ತಳಿಯದಿರೆನ ಲೆಂದನೂ ॥ ೧ ॥ ವೃತ್ಯು ನಿನ್ನಾಧೀನವೇ । ಮುಚ್ಚಿಲೊ ಬಾಯ । ಕತ್ತ ರಿಸುವೆನು ಜಿಹ್ವೇ ॥ ವೃತ್ಯು ನೀನಾಗಿರೆ । ವೃತ್ಯುಂಜಯನು ಎನ್ನ । ಸತ್ವ ನಿರೀಕ್ಷಿಸೆಲೋ ॥ ೨ ॥ ನೋಡಿಹೆ ನಿನ್ನಧಟಾ । ಯೆನ್ನೊಳು ಧುರ । ಮಾಡು ತ್ತೋಡಿರ್ಪ ಭಟ ॥ ಆಡಲೇನದ ಮತಿ । ಗೇಡಿ ಮುಂದೊದಗಲು । ತೋಡುವೆ ಕರುಳನೀಗಾ ॥ ೩ ॥ ಧರಣಿಪರ ಪರಿಮಿತಾ । ಎನ್ನಂಘ್ರಿಗೆ । ಶಿರವ ಚಾಚುವ ರಿನಿತಾ ॥ ಅರಿಯುದೆ ಬಗುಳಲು । ಕೊರತೆ ಪೋರದು ಪಾವ । ಕೈರಗಲು ತಲೆಗಾಯ್ವೆನು ॥ ೪ ॥

ರಾಗ ನರಾರವಿ - ಏಕ ತಾಳ

ಸರುವರಜಯಿಸಿದ ಹಮ್ಮಿನೊಳಿನ್ನೊಳು । ಧುರಕೊದಗಲು ಕಡೆಗೇ ॥ ಗರುವದೊಳಳಿ ಸಂಪಿಗೆ ಮಧುಹೀರಿದ । ತೆರಸಹುದೈ ನಿನಗೇ ॥ ೧ ॥ ಮಾತು ಗಳೇತಕಮಾತ್ಯನ ಬಲದಿಂ । ಖ್ಯಾತಿಯು ಪಡೆದಿರುವಾ । ರೀತಿಯುಸ್ಸರಿತಿಹೆ ಪೌರುಷವನು ಬಿಡು । ಘಾತಿಸುವೆನು ಕ್ಷಣಕೇ ॥ ೨ ॥

ರಾಗ ಶಂಕರಾಭರಣ - ಮಟ್ಟೆ ತಾಳ

ಕಳ್ಳ ನೃಪತಿಯರಿತೆ ಸಚಿವ । ನಿಲ್ಲ ದೀರ್ಪುದರಿತು ಬಂದ । ಮಲ್ಲತನವ ನಿಲಿಪೆ ನಿನ್ನ । ಹಲ್ಲ ಮುರಿವೆನೂ ॥ ೧ ॥ ಎಂದು ರೋಷವೆತ್ತು ಖಡ್ಗ । ದಿಂದಲಿರಿಯೆ ತಪ್ಪಿಸುತ್ತ । ಲೆಂದನೆಲವೊ ಮೊದಲಿನಂದ । ವೆಂದು ತಿಳಿವುತಾ ॥ ೨ ॥ ಮುಂದೆ ಬರಲು ಯಮನಪುರಕೆ । ಹೊಂದಿಸುವೆನು ನಿನ್ನನೆನುತ । ಲಂದು ತಿವಿಯಲಸಿಯ ಸೆಳೆದ । ಕುಂದದಾಕ್ಷಣ ॥ ೩ ॥ ಮತ್ತೆ ಪೊಸ ಕಠಾರಿ ಪಿಡಿದು । ಕೃತ್ತಿವಾಸನಂತೆ ಖಾತಿ । ವೆತ್ತು ಹೆಣಗುತೀರ್ದ ವೀರ । ಪೃಥ್ವಿಪತಿಯೊಳು ॥ ೪ ॥ ಭಳಿರೆ ಚಂದ್ರಾಂಗವಸೆ ಕೈಯ್ಯ । ಪೋಲಿ ವಾಯುಧವ ಕಳೆದ ಧೀರ । ನಳವಿಯೇಕೊ ನಿನಗೆ ತೆರಳು । ಹಳುವಕೆಂದೆನೇ ॥ ೫ ॥ ಅಡವಿಗಾರು ಪೋಪುದೆಂಬು । ದೊಡನೆ ತೋರ್ಪೆನೀಗಲೆನ್ನ । ಖಡುಗನೆಳೆದ ಗರ್ವಾಂಬುಧಿಗೆ । ಕೊಡನ ಮಗನಿರ್ಹೆ ॥ ೬ ॥ ಎರಿಕಿಸೆನುತ ಪೊಯ್ಯೆ ಧರಣಿ । ಗುರುಳಿ ವೀರಪಾಂಡ್ಯ ಚೇ । ತರಿಸುತೆದ್ದು ಕ್ರೋಧದಿಂದ ಧುರಕೆನಿತ್ತನೂ ॥ ೭ ॥

ವಾರ್ಧಿಕ

ಕಾದಲವರೀರ್ವರೀತೆರದಿಂದ ತಮಗೆ ಜೇ । ಕಾದಗಣಿತಾಯುಧಂ ಗಳೊಳು ವೀರಾಖ್ಯನೇ । ಕಾದಲತಿಭಟನೆಂದು ವೇಣೂರ ಧೊರೆಯೆಂದು ಪೊಗಳಲಿಕ್ಕಡೆಯು ಭಟರೂ ॥ ಕಾದಕಬ್ಬಿಣವಾಗೆ ಪಾಂಡ್ಯಮರುಗುತ ಮಾತ್ಯ । ಕಾದ ಮೊದಲಿನ ಧುರದೊಳಿಂದವಂ ಇಲ್ಲವೇ । ಕಾವನೋ ಇನ್ನಾರುಕಾಯ್ವರೈ ಶಿವ ಶಿವೆಂದೆನುತ ಯೋಚಿಸಿ ಮನದಲೀ ॥ ೧ ॥

ಭಾಮಿನಿ

ಧುರದೊಳಗೆ ಜಯವಿಲ್ಲವೆನ್ನುತ । ಹರಣದಾಸೆಯೊಳೋಡಿ ತನ್ನಯ । ಪುರಕೆ ಸತಿಸುತರೊಡನೆ ನಿಶಿಯೊಳು ಕಪಟವೇಷದಲೀ ॥ ತೆರಳ ಬಹು ದಣಿ

ವೃತ್ತ ದಿನ ನಾ । ಲ್ಕರಲಿ ಕಾಂಚಿಯು ಸೇರಿ ಬಳಿಕ । ಲ್ಲಿರುವ ಸುಖಗ್ರಾಮ ದೊಳು ವಾಸಿಸುತೀರ್ದ ವೀರಾಖ್ಯ ॥ ೧ ॥

ರಾಗ ನಾದ ನಾಮಕ್ರಿಯೆ - ಅಷ್ಟತಾಳ

ವೀರಪಾಂಡ್ಯನು ಪಿಂದಕ್ಕೋಡಿದ । ನೆಂದು । ಭೂರಿಶೋಕದೊಳು ಚಂದ್ರಾಂಗದ ॥ ಸೇರುತ್ತ ಪುರದೊಳಗರಸಲೂ । ಕಾಣ । ದೋರಂತೆ ಪೇಳ್ದ ತನ್ನವರೊಳು ॥ ೧ ॥ ಎಣ್ಣಿದ ಬಯಕೆ ಈಡೇರಿತೂ । ನೃಪ । ಕುನ್ನಿ ಯೊಳ್ ಜಯವೆಮ್ಮ ಸೇರಿತು ॥ ಇನ್ನೇನು ಪಾಂಡ್ಯ ಧರಿತ್ರಿಯಾ । ನಾಳ್ವ । ಜಾಣತನವ ನೋಡಿರೆನ್ನಯಾ ॥ ೨ ॥ ಆದರಿಂದ ನೀವ್ ಪೋಗಿ ಬಾರ್ ಕೂರ । ರಾಜ । ಸಿದ್ಧವರ್ಮಗೆ ಹೇಳೀ ವಿವರಾ ॥ ಪದಗಿನಿಂ ವೇಣೂರು ರಾಜ್ಯವಾ । ನಾಳು । ತ್ತೊದಗಿಸಲೆನಗಿನ್ನು ಕಪ್ಪವಾ ॥ ೩ ॥

ಭಾಮಿನಿ

ಇನಿತುಸುರಿ ಕಳುಹಿಸುತ ಸಿಂಹಾ । ಸನವನೇರ್ದಾ ಪಾಂಡ್ಯ ಧರಣಿಯ । ಜನಪ ಚಂದ್ರಾಂಗದನು ಪಾಲಿಸುತೀರ್ದ ಸಂಭ್ರಮದೀ ॥ ಎನುವದೇನಾ ಮಧುರೆಯೊಳು ನಿಜ । ಧನದನಂತಿಹ ದೇವಪಾಂಡ್ಯನು । ವಿನಯದಿಂ ಪ್ರಿಯಸಖನ ಕರೆದಿಂತೆಂದನೊಂದಿನದೀ ॥ ೧ ॥

ರಾಗ ಸಾರಂಗ - ಅಷ್ಟತಾಳ

ಮಿತ್ರ ಕೇಳ್ ನಾರಾಯಣಾಖ್ಯ । ಮನ । ವಿತ್ತು ನಾ ಪೇಳುವ ವಾಕ್ಯ ॥ ಸತ್ಯವ ಬಿಡದೆ ಸನ್ಮಾರ್ಗದಿ ಹರವರ । ವೃತ್ತಿಯಿಂದೀ ಮಧುರೆ ಯೊಳು ನೆಲೆ । ನಿತ್ತು ಕೀರ್ತಿಯ ಪಡೆದೆವೂ ॥ ೧ ॥ ಹೊರನಾಡ ವಾಣಿಜ್ಯ ವೆಸಗೇ । ಬಲು । ತರಲಾಭವೆಂದೆಯಾಬಗೆಗೇ ॥ ವಿರಚಿಸುತುತ್ತಮ ನಾವೆಯ ನವರೊಳು । ಸರಕುಗಳ ಹೇರಿಸುತ ನಿನ್ನನು । ಹರುಷದಿಂ ಕಳುಹಿರ್ದೆನು ॥ ೨ ॥ ಆರುವತ್ಸರದೊಳಾಗಿರುವಾ । ವ್ಯಾ । ಪಾರದೊಳೆಮಗೇರ್ಪಾದಾ ಯವಾ ॥ ತೋರು ಮೇಣಾವಾವ ದೇಶಕ್ಕೈದಿಹೆಯೆಂಬ । ವಾರತೆಯನರುಹೆ ನಲು ಕೇಳ್ದಾ । ಚಾರುಶೀಲನು ಪೇಳ್ದನೊಯ್ಯನೆ ॥ ೩ ॥

ರಾಗ ಬೇಗಡೆ - ಅಷ್ಟತಾಳ

ಕೇಳಯ್ಯಾ । ಮಿತ್ರ । ಕೇಳಯ್ಯಾ ॥ ಕೇಳಯ್ಯ ನಾನೆಂಬ ಮಾತ

ನೀ ದಯದೀ । ಪೇಳುವೆ ನಮ್ಮ ಭಾಗ್ಯವನನುಕ್ರಮದೀ ॥ ಕೇಳಯ್ಯ ॥ ಹಡಗದಿ ವಿಧವಿಧದೊಡವೆಯ ಹೇರೀ । ಒಡನೈದ್ದಿರೋಮು ಸೈಬೀರಿಯ ಸೇರೀ ॥ ಕಡುಚತುರತೆಯೊಳ್ ವಿಕ್ರಯಿಸುತ್ತಲದನೂ । ನಡೆದು ಮುಂದಕೆ ಕೊಳ್ಳುತ್ತಧಿಕ ಲಾಭವನೂ ॥ ಕೇಳಯ್ಯ ॥ ೧ ॥ ಈಜಿಪ್ಟ್ ಮೊದಲಾದಾ ಫ್ರೀಕದೊಳಿರುವ । ಸೋಜಿಗವಹ ನಗರದೊಳಾಂತುಧನವಾ ॥ ವ್ಯಾಜ ವಿಲ್ಲದೆ ಬುದೆತದ್ ವೃತ್ತಿಯಿಂದಾ । ರಾಜಿಪದ್ರವ್ಯಗಳಾದಾಯುವೆಂದಾ ॥ ೨ ॥ ಆದರಿಂದ ಹಿರಿದಾದ ಪೊಸನಾವೆಯೊಂದಾ । ಚದುರ ನೀ ಮಾಡಿಸುತಿತ್ತ ರಾನಂದ ॥ ವದಗಿಸುವೆಯ ಯೆನಲೊಪ್ಪಿ ಕಾರ್ಮಿಕರಾ । ಸದಮಲ ಕರೆ ತರಿಸಿದ ಪತ್ತುನೂರ ॥ ೩ ॥

ವಾರ್ಧಿಕ

ಸುರಿತ ಶಿಲ್ಪಿಗಳಿಂಗೆ ಚೆಸಸಲತಿ ತೋಷಮಂ । ಧರಿಸುತೆಂಟೇ ದಿನದಿ ಯೋಗ್ಯವಹ ನಾವೆಯಂ । ವಿರಚಿಸುತಲುತ್ತಮಾಯದಿ ಪೂರ್ತಿಗೊಳಿಸಿ ಪಾಂಡ್ಯನಿಗೊರೆಯೆ ಸಂಭ್ರಮದಲೀ ॥ ಅರಿತು ಸುಮುಹೂರ್ತದೊಳು ಬಳಿಕಲಾ ಹಡಗಮಂ । ಶರಧಿಗಿಳಿಸಲು ನಿಶ್ಚಯಿಸಿ ಬಡಗಿಯೊಡೆಯನಂ । ಕರೆಸಿ ಭೂತ ವ್ರಜಕೆ ತೃಪ್ತಿಪಡಿಸಲ್ ಕುತ್ತಿಪೂಜೆಯಂ ಮಾಡಿಸಿದನೂ ॥೧॥

ರಾಗ ಖಮಾಚ್ - ತ್ರಿವುಡೆ ತಾಳ

ಯೆಡಯೆಡಾ ನೀ ವಾಡ ಕುಂಞಂಬೂ । ತಿರಿಮುಲರಿಜ಼ಿಡ್ಡ್ ॥ ಯೆಡ ಯೆಡಾ ನೀ ವಾಡ ಕುಂಞಂಬೂ ॥ಪಲ್ಲ॥ ಕೋತಿರಿಯುಂ ಪಚ್ಚ ಪೊಂಜಿಲ್ । ಪೂತುಣಿಯುಂ ಯೆಣ್ಣ ಕ್ಕೋಯಿ । ನಿತಾರಿಂಜ್ ತೇಂಜ ಕುರುದಿ । ಚಾತು ಕುಟ್ಟಿ ಕಾತಿರಾಡೆ ॥ ಯೆಡಯೆಡಾ ॥ ಅ. ಪ. ॥ ಕೊಂಡು ವಾ ಕೋಲು ಯೆಲವುಳೀ । ಕೈವಾಳ್ ಮುಟ್ಟಂ । ಯೆಂಡೆದನ್ನೆ ಚಿಪ್ಪಿ ಯೆಡವುಳೀ । ಮುಂಡು ಕಷ್ಣಂ ಕೈಚ್ಚದೆವುಡೆ । ಯುಂಡು ಕುಂಞಿರಾಮು ಪಂದಿ । ರಂಡ್ ನೆಲ್ಲ್ ವೆಕ್ಕ್ ಚಿರಿ । ಯುಂಡನೆವಿಡೆ ಪೋಯಿವರಟ್ ॥ ಯೆಡ ಯೆಡಾ ॥ ೧ ॥ ಕಳ್ಳರಾಕ್ ಚರಿಚ್ಚಿವೆಕ್ಕಣಂ । ಯೆಲ್ಲಾ ಗಣಂಜ । ಳ್ಳುಳ್ಳ ಕೋಯರ್ ತ್ತ್ ವೇಳಂಬಣಂ ॥ ವಳರೆವಕ್ತಿವೆಚ್ಚು ಕೈಚ್ಚ । ವೆಲಿಯು ಪೊಜೆಡ್ ತ್ತ್ ನಮ್ಮೊ । ಉಳ್ಳ ದೋಷಂ ಪರಿಹರಿಚ್ಚ್ । ನಲ್ಲೆದಾಯಿ ವರಟ್ಟೆ ಮೇಲೆ ॥ ಯೆಡ ಯೆಡಾ ನೀ ವಾಡ ಕುಂಞಂಬೂ ॥ ೨ ॥

ರಾಗ ಖಮಾಚ್ - ತ್ರಿವುಡೆ ತಾಳ

* [ಮುತ್ತು ಯೆತ್ತ ಪೋದ್ಯ ಬಾರಿಂಗೇ । ಅರ್ಲ್‌ಕೆಪ್ಯೋಲುತಕ್ಯೊ ॥ ಮುತ್ತು ಯೆತ್ತ ಪೋದ್ಯ ಬಾರಿಂಗೇ ॥ ಪಲ್ಲ ॥ ಭತ್ತ ಬೆಕ್ತಿಲ್ ಕುಟ್ಟಿಲ್ ಕೋಲು । ಬತ್ತಿ ಯೆಣ್ಣೆ ತುಪ್ಪ ಕೋಳಿ । ವತ್ರ ಕುರ್ದಿ ತೆಂಗಿನ ಶ್ಯಾ । ಹತ್ರ ತಂವಿತ್ತ ನಿಲ್ಲ್ಯೊ ॥ ಅ. ಪ ॥ ಮುಟ್ಟ್ಯ ಬಾಳರವು ಗೀಪೂಳೀ । ಉಳಿಕ್ಷ್ಯೆ ಬಾಳು । ಮುಟ್ಟ್ಯೆಯಿಲ್ಲಿ ತಾದ್ಯಕೋಲುಳೀ ॥ ಬಟ್ಟ್ಯ ಪೆತ್ತ ಹ್ಯೊದ ಕ್ಯೊವ । ಬಟ್ಟಿಗಳ ತಂವಿಷ್ಠಿ ಸುತ್ತ । ತಟ್ಟಿ ತುಂಬ ಆಕ್ಕಿ ಭತ್ತ । ಯಿಟ್ಟ್ಯ ಹೋಗು ಕಿಟ್ಟ್ಯ ಬರ್ಲಿ ॥ ಮುತ್ತು ಯೆತ್ತ ॥ ೧ ॥ ಮದ್ಯ ಪಾತ್ರೆ ತುಂಬಿ ತಂದಿಡೂ । ಭೂತಗಣಕೆ । ಯಿಷ್ಟ ಕೋಳಿ ಕೊಯಿದು ನೀಕೊಡೂ । ತ್ರಪ್ತೆಯಿಟ್ಟ್ಯ ಗೈದಪೂಜೆ । ಗದ್ದ ಕುಂದು ಕೊರತೆಗಳನು । ತಿದ್ದಿ ಸ್ವೀಕರಿಸುತ ನಮ್ಮ । ನುದ್ಧರಿಸಲು ಬೇಕು ಮುಂದೆ ॥ ಮುತ್ತು ಯೆತ್ತ ಪೋದ್ಯೊ ಬಾರಿಂಗೆ ॥ ೨ ॥]

* ಮಲೆಯಾಳ ಪದ ಕಷ್ಟವಾಗುವವರಿಗೆ ಉಪಯೋಗಿಸುವವಕ್ಕಾಗಿ ಬರೆದುದು.

ಭಾಮಿನಿ

ವಿರಚಿಸುತ ಪೂಜೆಯನು ಪಡಗವ । ಶರಧಿಗಳಿಸಲ್ಪದರೊಳಗೆ ನೆಲ । ಸಿರುವ ಕುಂಡೋದರನು ಬಡಗಿಯ ದೇಶವನು ಸೇರೀ ॥ ನರಬಲಿಯ ನೀಯುದಿರೆ ಬಿಡೆನೆಂದೊರೆಯೆ ಕೇಳ್ದಿದು ಕಪಟವೆನ್ನುತ । ಜರೆದು ಭಂಗಿಸಿ ದೇವಪಾತ್ರನು ಪೇಳ್ದನವನೊಡನೇ ॥ ೧ ॥

ರಾಗ ಭೈರವಿ - ಏಕ ತಾಳ

ಯೇನೆಲ ಮುದಿಯಾಚಾರೀ । ಬಲು । ಜಾಣತನಂಗಳ ತೋರೀ ॥ ನಾನಾವಸ್ತುವ ಪಡೆದೂ । ಮು । ತ್ತೇನನು ಕೇಳದೆಯಿಂದೂ ॥ ೧ ॥ ಭೂತ ಕಾಲದೊಳೀ ತೆರನಾ । ಬಲಿ । ಭೂತವು ಕೇಳಿದಪದನಾ ॥ ನಾ ತಿಳಿಯೆನು ಯೇಲೊ ಮೂಢ । ಪೊಸ । ರೀತಿಯ ತೋರ್ದೆಯ ಗಾಢ ॥ ೨ ॥ ದಕ್ಷಣ ದಿಂದಲಿ ಬಂದೂ । ಈ ತಕ್ಷನು ಪೇರಿಸಿದರೊಂದೂ ॥ ದಕ್ಷದು ಸುಮ್ಮನೆ ಬಿಡೆನೂ । ನೀ । ನೊಕ್ಕಲಿಗಳಪಿದರೆನ್ನೂ ॥ ೩ ॥ ಶಿಕ್ಷಿಸುವೆನು ನಾ ನಿನ್ನ । ನರ । ಭಕ್ಷಣೆ ಯಾಚಿಸಲಿನ್ನಾ ॥ ಅಕ್ಷಿಗೆ ತೋರುವಂದದಲೀ । ಪ್ರ । ತ್ಯಕ್ಷವಿಗಣ ಮುಂಬರಲೀ ॥ ೪ ॥

ವಾರ್ಧಿಕ

ಇಂತುಗರ್ಜಿಸುತೀರ್ವುದರಿತು ಕುಂಡೋದರ ಮ । ಹಾಂತ ರೂಪವ ದೋರಿ ಮಾನವನ ಶಿರವರಿದು । ಸಂತಸಂ ಬಡಿಸದಿರೆ ನಾವೆಯನು ಬಿಡೆ ನೆನ್ನು ತಾರ್ಭಟಿಸೆ ಕೇಳಿ ಪಾಂಡ್ಯ ॥ ಚಿಂತಿಸುತ ತಾನ್ಯಾರ ಬಲಿಯಿತ್ತು ಭೂತಮಂ । ಸಂತೈಸಲಾರೊದಗುವರೊ ಶಿವ ಶಿವಾ ಯೆನು । ತ್ರಾಂತರಂಗದಿ ಯೋಚಿಸುತ ತನ್ನ ಮನೆ ಗೈದ್ದಿ ಕಾಂತೆಯಳ ಕರೆದೆಂದನೂ ॥ ೧ ॥

ರಾಗ ಶಂಕರಾಭರಣ - ಅಷ್ಟತಾಳ

ಲಾಲಿಸೂ । ಪ್ರಾಣಪ್ರಿಯೆ ಮದ್ವಚನವನು । ಲಾಲಿಸೂ ॥ ಪಲ್ಲ ॥ ವಾರಿಜಮುಖಿ ಶುಕವಾಣೀ । ಮದ । ವಾರಣಗತಿ ಮೃದುಪಾಣಿ । ಗುಣ । ವಾರಿಧಿ ಕಾಳಾಹಿವೇಣಿ ॥ ತರುಣಿ ವಾರವಂದಿತೆ ನಾರಿ । ಹಾರಶಿರೋಮಣಿ । ವಾರತೆ ಕೇಳೆನ್ನ ದುಃಖಾಂಧ ದಿನಮಣಿ ॥ ಲಾಲಿಸು ॥ ೧ ॥ ಹರಿಣಲೋಚನೆಯೆ ತಾನಂದೂ । ಶ್ರೇಷ್ಟ । ತರವಹ ನಾವೆಯನೊಂದೂ । ಗೈಸು । ತಿರದಿತ್ತರೆನ್ನಾಪ್ತಬಂಧು ॥ ಬಲು । ಹರುಷದಿಂ ಪರದೇಶದೊಡನೆ ವ್ಯಾಪಾರವ । ವಿರಚಿಸು ತೈತಂದನಲ್ಲೆ ಯೆನ್ನಯನಲ್ಲೆ ॥ ಲಾಲಿಸು ॥ ೨ ॥ ಚದುರೆ ಕೇಳಿವನು ಕೈಗೊಂಡೂ । ಆರ । ಬುಧವಾಯ್ತು ಯೋಗ್ಯವಿದೆಂದೂ ॥ ದೊರ । ಕಿದ ಲಾಭ ಹಡಗೆರಡೆಂದೂ ॥ ತಿಳಿ । ಯದ ಸತಿ ನೀನಲ್ಲ ಪೊಸತೊಂದು ಜಹಜನು । ಪೊದಗಿಸೆನ್ನುತ ಸಖ । ನೊರೆಯೆಗೈಸಿದೆ ಕಾರ್ಯ ॥ ಲಾಲಿಸು ॥ ೩ ॥ ಬಡಗಿಯರಿಚ್ಛೆಯ ಸಲಿಸೇ । ಪೊಸ । ಹಡಗವನಿಳಿಸಲುಜ್ಜುಗಿಸೇ । ಭೂತ । ಕೊಡು ನರಬಲಿಯೆಂದಾರ್ಭಟಿಸೇ ॥ ತೋಷ । ವುಡುಗಿ ಚಿಂತೆಯೊಳಾರ ನೀವುದೆನುತ್ತಿಲ್ಲಿ । ಗೊಡನೆ ಬಂದಿಹೆ ನೀನೊಪ್ಪಿದಡಾಯ್ತು ಕಜ್ಜವು ॥ ಲಾಲಿಸು ॥ ೪ ॥

ರಾಗ ಕೇದಾರಗೌಳ - ಝಂಪೆ ತಾಳ

ಎನಲು ಶಿವೆದೇವಿ ಕೇಳ್ದು । ಪದಕೆರಗಿ । ಇನಯನೊಡನೆಂದಳಿಂತೂ ॥ ಮನುಜ ಬಲಿ ಬಯಸೆ ಗಣವೂ । ಯೆನ್ನ ಮತ । ವನು ಕೇಳಲೇಕೆ ನೀವು ॥ ೧ ॥ ಪೆತ್ತ ತಾಯೊಡನನುವನೂ । ಪಡೆಯುವುದು । ಕರ್ತವ್ಯವಲ್ಲ ವೇನೂ ॥ ಪುತ್ರರಿಹರೇಳು ಮಂದೀ । ಪೋರ್ವನನು । ಇತ್ತು ಸಹಕರಿಸು

ಮಡವೀ ॥ ೨ ॥ ಹೆತ್ತ ಕರುಳಿನ ನೋವನೂ । ತಿಳಿಯುದೋಲ್ । ಚಿತ್ತರಿವು ನೇಕಿನಿತನೂ । ತೆತ್ತುವಿತ್ತವ ವೃದ್ಧನಾ । ಪಡೆದು ಬಲಿ । ಯರ್ಥಿಯಿಂದಿತ್ತ ರೇನಾ ॥ ೩ ॥ ಅನ್ಯರನು ಹಿಂಸಿಸುವುದೂ । ಜಿನಮುತಕಿ । ದನ್ಯಾಯ ತಿಳಿದು ನೋಡೂ॥ಕನ್ನೆ ನೀ ಮನವಮಾಡಲೂ।ಭಾಗ್ಯ ಮೇ।ಲಿನ್ನುಳಿದ ಸುತರಿಗೆನಲೂ ॥ ೪ ॥ ತರಳನನು ಕಳೆದು ಬರುವಾ । ಧನವೇಕೆ । ವಿರಚಿಸುತ ಬವಲು ಹಡಗಾ॥ ಸಿರಿಯನಾರ್ಜಿಸಲಾಗದೇ । ಹಣವೀಯೆ । ದೊರಕುವನೆ ಸುತನು ಮುಂದೇ ॥ ೫ ॥ ಸತಿಗೆ ಪಾತಿವ್ರತ್ಯವೂ । ಘನವೆಂದು । ಶೃತಿವಚನ ಪತಿಜೀವವೂ ॥ ಗತಿಸದುಳಿವರೆ ಪುತ್ರನಾ । ಯಿತ್ತೆನ್ನ । ವ್ಯಥಿಸದುಳುಹಿಸು ಜೀವನಾ ॥ ೬ ॥

ರಾಗ ಆನಂದ ಭೈರವಿ - ಅಷ್ಟತಾಳ

ದಾಟಿ : ಹಂಗೀಸ ಬೇಡತ್ತಿಗೆ-ಯೆಂಬಂತೆ

ಬಾಗುವಳಲ್ಲ ನಾನು । ಮಾತಿಗೆ ತಲೆ । ದೂಗುವಳಲ್ಲ ನಾನೂ ॥ಪಲ್ಲ॥ ಬಾಗುವಳಲ್ಲನಾನಾಗದ ಕಾರ್ಯಕ್ಕೆ ॥ ಬಾಗುವಳಲ್ಲ ನಾನೂ ॥ ಅ. ಪ ॥ ಪೊಸತು ನಾವೆಯು ನಿರ್ಮಿಸುತ್ತಿಂದೂ । ಪೌರಾಣ ಶಾಸ್ತ್ರವ । ಸುಸುರು ತೆನ್ನಯ ಮನವಲಿಸಲೆಂದೂ ॥ ಆಸೆ ತೋರುತ್ತೆಸೆವ ಭೂತಕೆ । ತೋಷಗೊಳಿ ಸುವಡಿನಿತು ಕೊರಗಲು ॥ ಬಾಗುವಳಲ್ಲ ನಾನು ॥ ೧ ॥ ಪುತ್ರರಿಲ್ಲವೆನುತ್ತ ಭೂತಳದೀ । ಮಾತಾಪಿತರು ಮರು । ಗುತ್ತ ವ್ರತ ಯಜ್ಞಾದಿಗಳ ಕ್ರಮದೀ ॥ ಚಿತ್ತವಿಟ್ಟೆಸಗುವರು ಕಷ್ಟದಿ । ಹೆತ್ತ ಕುವರನ ತರಿಯ ಲೀವರೆ ॥ ಬಾಗುವ ಳಲ್ಲ ನಾನು ॥ ೨ ॥ ದೈವಗತಿಯಿಂದೆನಗೆ ಜನಿಸೀರ್ದ । ಸುತರೇಳು ಜನರಿಹ । ರವರೊಳೋರ್ವನ ನಳಿಯಗೊಡೆ ಸಿದ್ಧಾ ॥ ಅವಘಟಿಸಿ ನೀ ಮುನಿಯ ಲೀಕ್ಷಣ । ತವಗೃಹವ ನುಳಿಯುವಳು ವಿಮಲೆಯು ॥ ಬಾಗುವಳಲ್ಲ ॥ ೩ ॥

ಭಾಮಿನಿ

ನಾರಿ ನಿನಗೇಕೆನಿತು ಛಲ ಮದ । ವೇರಿ ತನ್ನನು ನಿಂದಿಸದೆ ಸುಕು । ಮಾರನೊಬ್ಬನನಿತ್ತು ಮುಂದಿನ ಭಾಗ್ಯಕನುವಾಗೂ ॥ ಮೀರಿಪೋದರೆ ನಿಲ್ಲದಸು ನಾ । ಸಾರಿದೆನು ತವ ತಿಲಕ ಮಂಗಲ । ಹಾರ ಧರಿಸುವ ಯೋಗ ಕಳೆಯದಿರೆನಲು ಶಿವದೇವಿ ॥ ೧ ॥

ರಾಗ ಕೇದಾರಗೌಳ - ಅಷ್ಟತಾಳ

ಕಂದನ ಬಲಿಯಿತ್ತು । ಹೊಂದುವೆ ಭಾಗ್ಯವ । ನೆಂದಾಸೆಯಿಂದಿರುವ ॥ ತಂದೆಯೆ ಸುತರ್ಗೆಲೆ । ಮಂದಮತಿಯೆ ನೀನು । ಮುಂದೆನ್ನ ಪತಿಯಲ್ಲವೂ ॥ ೧ ॥ ನಿನ್ನಸು ಸಿರಿ ಕ್ಷಿತಿಯನ್ನಿಚ್ಛಿಸುವಳಲ್ಲ । ಚಿಣ್ಣರನೊಡಗೊಡುತ್ತ ॥ ಮಿಣ್ಣನಯ್ಯನ ಮನೆ। ಯನ್ನು ಸೇರುವೆ ನೀನು। ಯೆಣ್ಣದಿರೆನುತ್ತೈದಲೂ ॥೨॥

ವಾರ್ಧಿಕ

ನಿಷ್ಠುರದಿ ವಿಮಲೆ ತನುಜರಗೂಡಿ ಪೋಗೆ ಸಂ । ಕಷ್ಟದೊಳ್ ಸುತ ದಾರರೊದಗದಿರೆ ಸಪಕರಿಪ । ಯಿಷ್ಟರಾರ್ ಜಗದಿ ಹರಹರಯೆಂದು ಪಾಂಡ್ಯ ಬಸವಳಿದು ಮನ ಮರುಗುತಿರಲೂ ॥ ಅಷ್ಟರೊಳಗತ್ತ ವೀರಾಖ್ಯ ನರ್ಧಾಂಗಿ ಸುಖ । ಪಟ್ಟಣದೊಳನ್ಯರಿಂದೀ ವಾರ್ತೆ ಯರಿತು ತಾ । ಪುಟ್ಟ ಬಾಲಕ ಜಯನ ನೊಡಗೂಡಿ ಪತಿಯನುವ ಪಡೆದು ತಾನಡೆ ತಂದಳೂ॥೧॥

ಕಂದಪದ್ಯ

ಬಂದಾಕ್ಷಣ ತನ್ನಣ್ಣನ । ಮುಂದಿರುವನುಪೊಕ್ಕಳು ತೊರಗೀರ್ಪನ ಬಳಿಗಂ ॥ ಮುಂದರಿದಡಿಗೆರಗುತಲಿಂ । ತೆಂದಳು ಕಂಬನಿ ಸುರಿಸುತಲತಿ ದುಗುಡದೊಳುಂ ॥ ೧ ॥

ರಾಗ ಕಾಂಬೋದಿ - ಯೇಕತಾಳ

ಯೇತಕಿಂಥ ಚಿಂತೆ ಬಂತು । ಅಣ್ಣದೇವ ॥ ನೀನು । ಮಾತನಾಡ ದೀರ್ಪುದ್ಯಾಕೊ । ಅಣ್ಣದೇವ । ನೀತಿವಂತೆನ್ನತ್ತಿಗೆಲ್ಲಿ । ಅಣ್ಣದೇವ । ತನು । ಜಾತರೆಲ್ಲಿ ಪೋದರರುಹು । ಅಣ್ಣದೇವ ॥ ೧ ॥ ಕತ್ತನೆತ್ತದ್ಯಾತಕಿಂತು । ಅಣ್ಣದೇವ । ಮರು । ಗುತ್ತ ಮುಸುಕನಿತ್ತುದೇಕೊ । ಅಣ್ಣದೇವ ॥ ಸತ್ಯವತಿ ನಿನ್ನನುಜೆಯೆನ್ನೊ । ಅಣ್ಣದೇವ । ಸತ್ಯ । ಬಿತ್ತರಿಸಬಾರದೇನೋ । ಅಣ್ಣದೇವ ॥ ೨ ॥

ರಾಗ ನೀಲಾಂಬರಿ - ಏಕ ತಾಳ

ಕೇಳವ್ವ ಸತ್ಯವತೀ । ಯೆನ್ನನುಜೆ ನಾ । ಪೇಳಲೇನಳುವ ಸ್ಥಿತೀ ॥ ಮೇಲಾದ ವ್ಯಾಪಾರ ಕೇ । ಹಡಗನೊಂದ । ಲೀಲೆಯಿಂ ಗೈದವಕೇ ॥ ೧ ॥ ಸಲಿಸಿ ಪೂಜೆಯ ನಿಳಿಸೇ । ಭೂತವು ನರ । ಬಲಿ ಕೊಡೆಂಪಾರ್ಭಟಿಸೇ ॥ ಕಳ

ವಳಿಸುತ ಸುತನಾ। ನೋರ್ವನ ನೀಯು। ತ್ತುಳಿಸುವೆ ನಾವೆಯುಸಾ ॥೨॥ ಯೆಂದಿದ ಶಿವದೇವಿಗೇ। ಪೇಳಲು ಜಾತಿ। ಯಿಂದವಳ್ ತವರ್ವರ್ತನೆಗೇ॥ ನೊಮಗೂಡುತ ಮಕ್ಕಳಾ। ಪೋದಳು ಯಿನ್ನು। ಮುಂದೇನು ಗತಿಯು ಪೇಳಾ ॥ ೩ ॥

ರಾಗ ಕೇದಾರಗೌಳ - ಝಂಪೆ ತಾಳ

ಸತ್ಯವತಿ ಕೇಳುತಿದನೂ। ತಲೆವಾಗಿ। ಮತ್ತೆಂದಳಣ್ಣ ನೀನೂ॥ ಪತ್ನಿ ಪುತ್ರರ ಕೂಡುತಾ। ಪೋದಳೆಂ। ದತ್ತು ಕೊಳಲಹುದೇ ಹಿತಾ ॥೧॥ ಸತಿಮ್ಮುನಿಮ ಫೋದಳೆಂದೂ। ಮರುಗುವಭಿ। ಮತವಲ್ಲ ಭೂತಕಿಂದೂ॥ ಹಿತಗೊಳಿಸಿ ಹಡಗನೆಂತೂ। ನಡೆಸಲೆಂ। ದತಿಶಯದ ಚಿಂತೆ ಬಂತೂ॥ ೨॥ ಬಿಡು ಬಿಡೀ ದುಗುಡವನ್ನೂ। ಸುತಜಯನ। ನೊಡಗೂಡಿ ಬಂದೀರ್ಪನೂ॥ ಕೊಡುಬಲಿಯ ಗಣಕವನನೂ। ಜೇಗದಲಿ। ಕಡಲಿಗಿಳಿಸಾ ಜಹಜನೂ॥ ೩॥ ನಿನಗೋರ್ವ ತರಳ ಜಯನಾ। ಹತಿಸಿ ಸುಖ। ತನಗೇಕೆ ಕೂಡಿಸುತನಾ॥ ವಿನಯದಿಂ ಪೋಗು ಪುರಕೇ। ಜನನಿಂದೆ। ಗನುಗೊಳಿಸದಿರು ಮುಂದಕೇ ॥ ೪॥ ಲೋಕಾಪವಾದ ಬರದೂ। ಕುಲಕೆ ಕಲೆ। ಸೋಕದೋಲ್ ಜಯನ ಕಡಿಮೂ॥ ನೀ ಕೊಡದೆ ಹಿಂದುಳಿಯಲೂ। ನಾನೀವೆ। ವ್ಯಾಕುಲವ ತ್ಯಜಿಸೀಗಲೂ ॥ ೫ ॥

ಭಾಮಿನಿ

ಅನುಜೆ ನೀ ಘಾತಿಸದಿರಾನೇ। ಸನುಮತದಿ ಗಣಕಿತ್ತು ಬಲಿಯನು। ಘನತರದ ಯುಕವುಳಿಸಿ ಹಡಗವ ಜಲಧಿಗಿಳಿಸುವೆನೂ॥ ಮನುಮಥಾರಿಯು ಯೆಣ್ಣಿದಂತಹು। ದೆನಲು ಹರುಷದೊಳಿತ್ತ್ರಸುತ ಜಯ। ನನು ಕೊಡುತ ಲಗ್ರಜಗೆ ವಹಿಲದಿ ತೆರಳೆ ಸ್ವಗೃಹಕೇ ॥ ೧॥

ರಾಗ ಕೇದಾರಗೌಳ - ಅಷ್ಟತಾಳ

ಮತ್ತೆ ಪಾಂಡ್ಯನು ತೋಷ। ವೆತ್ತು ಮಜ್ಜನಮಾಡಿ। ಸುತ್ತ ಬಣ್ಣದ ಜಲದೀ॥ ಚಿತ್ರಮಡಿಗೆ ಜಯ। ಗಿತ್ತು ಶೋಣಿತಮಾಲೆ। ಕತ್ತಿನೊಳಿರಿಸುತ್ತಲೀ॥ ೧॥ ಕರೆದು ತನ್ನಾಪ್ತನೊ। ಳರುಹಿ ಕೊಂಡೊಯ್ಯುತಾ। ತರಳನ ಪೊಸನಾವೆಗೆ॥ ಇರದೆ ಪ್ರದಕ್ಷಿಣೆ। ವಿರಚಿಸಿ ಖಡುಗವ। ಭರದೊಳಿತ್ತು ದಹ

ರಿತು ॥ ೨ ॥ ವಡನೆ ಭೂತವು ಬಂದು । ತಡೆದು ಪಾಂಡ್ಯನ ಕೈಯ್ಯ ಪಿಡಿ । ದಸಿ ಸೆಳೆದೀತನ ॥ ಕಡಿಯಿದಿರ್ ಬಲಿಯನು । ಕೊಡಬೇಡೆಂದೆನುತಲಿ । ಹಡಗವನಿಳಿಸುತ್ತಲೀ ॥ ೩ ॥ ತರಳ ನೀತನ ತಾತ । ಪರಮಭಕ್ತನು ಎನ್ನ । ನಿರದೆ ಸ್ತುತಿಪುದರಿಂದ ॥ ಹರಿಸೆನು ಕರೆದೊಯ್ದು । ಧರೆಯೊಡೆತನವಿತ್ತು । ನಿರತನಾ ಸಲಹುವೆನು ॥ ೪ ॥ ಎಂದು ಬಾಲನ ಕೂಡು । ತ್ತಂದು ಬಾರ್ ಕೂರಿಗೆ । ಬಂದು ಮಾರ್ಕಂಡೇಯಗೇ ॥ ವಂದನೆ ಮಾಡಿಸು । ತ್ತೆಂದಿತು ಜಯನೊಳು । ಕಂದಕೇಳೀ ಸ್ಥಳದಿ ॥ ೫ ॥ ಸರಸಿಜ ಭವನಿತ್ತ । ವರದಿಂದ ಸೀತೆಯು । ವರನವಿಯಾಗುತ್ತಲೀ ॥ ನರರಘಸ್ಪರ್ಶದಿ ಪರಿಹರಿಸುವಳಾಚೆ । ಗಿರುವದೆವಿಸುನಿ ಬಾವೀ ॥ ೬ ॥ ದಿನಪನೀ ಮುನಿಪಗೆ । ಮಾನವಲಿದಿತ್ತ ನಿ । ನ್ನೆನಿತು ಲೋಹವ ನಿಡಲೂ ॥ ಘನತರ ಕನಕ ವೆಂ । ದೆನಿಸುವ ದಿದು ಸಿದ್ಧ । ನಿನಗಿದರಧಿಕಾರವ ॥ ೭ ॥ ಇತ್ತೆನು ನಿನಗೇ ನಾ । ಪತ್ತು ಬಂದಾಗೆನ್ನ । ಚಿತ್ತದೊಳ್ ನೆನೆಬಹೆನೂ ॥ ಅರ್ಥಿಯೊಳೆನುತ್ತೈದೆ । ಪೃಥ್ವಿಪಾತ್ಮಜ ಜಯ । ನಿತ್ಯ ಧ್ಯಾನಿಸುತಲಿರ್ದ ॥ ೮ ॥

ವಾರ್ಧಿಕ

ಚಿತ್ತವಿಸಿ ಬನವಾಸಿಯೊಳು ರಾಜಮಣಿವರ್ಮ । ಪುತ್ರ ಕಾಮೇಷ್ಟಿಯಿಂ ಸುತರೀರ್ವರಂ ಪಡೆವು । ತರ್ಥಿಯಿಂದಿರಲಿ ನೃಪಾಲರವನಾಹವದಿ ಸೆರೆಪಿಡಿಯೆ ಕಂಡಾಕ್ಷಣಾ ॥ ಪೃಥ್ವಿಪನ ಸುತರ್ಕನಕ ವೀರವರ್ಮರ ಕೂಡ್ಯ । ಮಾತ್ಯ ತಾ ಗುಪ್ತದೊಳ್ ವಾರಕೂಲಕೆ ಬಂದು । ಖತ್ರಿಜೋತ್ತಮ ಮಾರ್ಕಂಡೇಯ ಮುನಿನಾಥಂಗೆ ಪೊಡಮಡಿಸೆ ಭಕ್ತಿಯಿಂದ ॥ ೧ ॥ ಆನಿತರೊಳಗಾಪುರದ ದೊರೆಯು ಹೇಮಾಂಗದಂ । ತನಯರಿಲ್ಲದೆ ದಿವಪಸ್ಯೈದೆ ಪಟ್ಟದ ಗಜಕೆ । ಜನರೆಲ್ಲರೊಂದಾಗಿ ಸುಮಮಾಲೆಯನ್ನಿತ್ತ ಡರಿವುತೀವಾರ್ತೆಯನ್ನು ॥ ಮುನಿಪ ಮಾರ್ಕಂಡೇಯ ನೊರೆದಂತೆ ಶಿಶುಯನುಂ । ಘನ ಪರಾಕ್ರಮಿ ವೀರವರ್ಮ ತರಿದಾ ರುಧಿರ । ವನು ಸೇವಿಸಲ್ ಬಳಿಕ ಗಜವೈದಿ ಪೂಮಾಲೆಯನ್ನವನ ಕಂಠಕಿಡಲೂ ॥೨॥ ವರಮಯೂರದ ರಕ್ತಕುಡಿದ ಕಾರಣದಿಂ ಮ । ಯೂರವರ್ಮನೆನಿಪ್ಪ ಪೆಸರಿಂದಲೀನೃಪಂ । ಹಿರಿಯನಾಳಿದ ರಾಜ್ಯ ಬನವಾಸಿಯಂ ಗೆಲ್ದು ಬಾರಕೂರಿನೊಳೆಸೆದನೂ ॥ ಅರಿತಿದನು ಜಿನಮತಕ್ಕೂನವಾಯ್ತೆಂದು ಜನ । ರಿರದೆ ಗೊಣಗಲ್ ಕೇಳಿ

ಪೊಸತೊಂದು ರಾಜಮತ । ವಿರಚಿಸುತ ಲಿರಕಗೊಂಡರ್ಗೆ ನಾಡವರಿಂದು ಪೆಸರಿಡುತಲವರೊಳಧಿಕಾ ॥೩॥ ವೀರರಂ ಬಂಟರೆನ್ನುತ ಕರೆದು ಸೇನೆಯಧಿ। ಕಾರ ವೀಯುತ ಯಮಿಯು ಪೇಳ್ದಂತೆ ಭೂಸುರರ। ಧಾರಿಣಿಪನಹಿಕ್ಷೇತ್ರದಿಂ ಬರಿಸಿ ಧರ್ಮದಿಂದಿಳೆಯ ಪಾಲಿಸುತಿರ್ದನೂ ॥ ಯೀರೀತಿಯಾಳಿಯಲಿದಡೆ ಬಳಿಕಲವನ ಸುಕು । ಮಾರಚಂದ್ರಾಂಗದಗೆ ಪಟ್ಟವಾಯಿತ್ತೀ ತೆರಂ । ವಾರ ಕೂಲದೊಳಿವನ ವಂಶದವರಾಳಿದರ್ ಯೆಂಟ್ನೂರು ವರುಷ ಬಿಡದೇ ॥ ೪ ॥ ಸಾಮವರ್ಮಂ ರಾಜನಾಗೆ ಬಾರ್ಕೂರಿನೊಳ । ಗಾಮಹ ಜಯಂತಿ ಕವ ರಾಜಧಾನಿಯು ಮಾಡಿ। ಕ್ಷೇಮದಿಂ ಪ್ರಜೆಗಳಂ ಧರ್ಮಯುತನಾಗಿ ಸಲಹುತ ಕೀರ್ತಿ ಸಂಪಾದಿಸೀ ॥ ತಾಮರಸ ಮಿತ್ರಾತ್ಮಜನ ಪುರವ ಸೇರೆ ತತ್ । ಭೂಮಿ ಗರಸಾದ ನವನಜ ಸಿದ್ಧವರ್ಮ ತಾ । ಪ್ರೇಮದಿಂ ರಾಜ್ಯವನ್ನಾಳುತಿರ್ದನ ದೇನನುಸುರುವೆನು ಸಂಭ್ರಮವನೂ ॥ ೫ ॥

ರಾಗ ಸೌರಾಷ್ಟ್ರ - ತ್ರಿವುಡೆ ತಾಳ

ಇತ್ತಲಾಜಯಂತಿಕದೊಳೊಂದಿನ । ಯಿತ್ತನೋಲಗ ಸಿದ್ಧವರ್ಮನ । ಗೋತ್ರಮನು ಕರೆದಿನಿತಮಾತ್ಯಗೆ । ಬಿತ್ತರಿಸಿದಾ ॥ ೧ ॥ ಹಿಂದೆ ಶಿಬಿ ನವರ್ಮಾಖ್ಯ ನಹಿಧರೆ। ಯಿಂದ ವಿಪ್ರರ ಬರಿಸಿ ವಿಧ ವಿಧ। ದಿಂದ ಮೂವತ್ತೆ ರಡು ಗ್ರಾಮವ। ಹೊಂದಿಸಿದಡೇ ॥ ೨ ॥ ಬೇರೆ ಬೇರ್ ಮುನ್ನೂರ ಯಿಪ್ಪ। ತ್ತಾರು ಭೇದಗಳಾಗುತವರೀ । ಧಾರಿಣಿಯ ಬೆಳಗಿಸುವರೇ ಸಂ । ಸಾರ ವಾಗೀ ॥ ೩ ॥ ಕೇಳು ಸಚಿವನೆ ನಮ್ಮ ಹಿರಿಯವ । ರಾಳಿ ಕೀರ್ತಿಯ ಗಳಿಸಿ ಮೆರೆದೀ । ಪೊರ್ಗಲಗಕೆ ಕುಂದುಂಟೆ ಪೇಳ್ ನ । ಮ್ಮಾಳಿಕೆಯೊಳು ॥ ೪ ॥

ಕೇದಾರ ಗೌಳ - ಝಂಪೆ ತಾಳ

ಯೆಸಲೆಂದ ಧೊರೆಯೆ ನಿನ್ನಾ । ಧರೆಯೊಳಗೆ । ಘನತೆ ಶ್ಲಾಘಿಸುವ ರಿನ್ನಾ ॥ ಸನುಮತದಿ ದ್ವಿಜರೀರ್ಪರೂ । ಧರ್ಮ ಬಿಡ । ದನುಸರಿಪರ್ತು ಳುವ ಜನರೂ ॥ ೧ ॥ ಆದರೇನೆಂಬೆ ನೊಂದೂ । ಪೊಸವಾರ್ತೆ । ಯಾದೇವ ಹಡಗಿಗೆಂದೂ ॥ ಸೋದರಿಯ ಸುತ ಜಯನನೂ । ತರಿಯಲನು । ವಾದು ದನು ಭೂತೇಶನೂ ॥ ೨ ॥ ತಡೆವು ಕರೆಶರುತ ಜಯನೇ । ಮಿಸುನಿ ಬಾ । ವ್ಯಡೆತನವನಿತ್ತು ಪೋಗೇ ॥ ಬೆಡಗಿನಲ್ಲಿಹನೆನ್ನುತಾ । ತಿಳುಹಿದರು । ಬಿಡದೆ

ಚಾರಕರು ಖ್ಯಾತಾ ॥ ೩ ॥

ರಾಗ ಭೈರವಿ - ಏಕತಾಳ

ಇನಿತೆನೆ ಕೇಳಿ ರೋಷದಲೀ । ವೇ । ಧಿನಿಪತಿಯೆಂದ ಮಂತಿಯಲೀ ॥ ಕನಕದ ಕೂಪವ ಜಯಗೇ । ಹೆ । ಗ್ಗಣ ತಾನೆನ್ನುತ ಹೀಗೇ ॥ ೧ ॥ ಸೊಕ್ಕಿನೊಳಿತ್ತರೆ ಬಿಡೆನೂ । ಪಿಡಿ । ದಿಕ್ಕುವೆ ಸೆರೆಗಾತನನೂ ॥ ಫಕ್ಕನೆ ಬರಲಾಗಣದ । ಹಣೆ । ಯಕ್ಕರ ತೊಡೆಯುವೆನೆಂದ ॥ ೨ ॥ ವಂದಿಮಾರ್ಬಲವೊಡಗೂಡಿ । ಬರ । ಲಂದಪಶಕುನವ ನೋಡೀ ॥ ಹೊಂದಿಸದದ ಚಿತ್ತದಲೀ । ನೃಪ । ಮುಂದೈದಿದ ಗರ್ವದಲೀ ॥ ೩ ॥

ಕಂದ ಪದ್ಯ

ಧರಣಿಪನೀಪರಿ ಬರುತಿರ । ಲರಿತಾಗಣ ತಳುವಲ್ ಶರಣಗೆ ಕೇಡಹುದೆಂ ॥ ದುರುತರ ಕ್ರೋಧದೊಳೈತಂ । ದೊರೆಯಿತು ಭೂಮಿಪಗೀತೆರ ಘರ್ಜಿಸುತಾಗಲ್ ॥ ೧ ॥

ರಾಗ ಭೈರವಿ - ಅಷ್ಟತಾಳ

ಆರೆಲ ನೃಪತಿ ನೀನೂ । ಯಿತೆರದಿಂದ । ಭೂರಿವಾಹಿನಿಗಳನ್ನೂ ॥ ಸೇರಿ ಕೊಂಡೈದುವು । ದಾರೊಳಾಹವಕೇನು । ಕಾರಣ ವರುಹೆನ್ನೊಳು ಬಾರಕೂರಿನ ಧೊರೆಯು । ಪ್ರಶ್ನಿಸುವುದು । ಯಾರೊ ನೀ ಘೋರಕಾಯ ॥ ಚೋರ ಜಯನ ಸೆರೆ । ಸೇರಿಸಪೋಪೆ ವಿ । ಚಾರವ ದ್ಯಾಕೊಖೂಳ ॥ ೨ ॥ ಶರಣ ಜಯನ ಕಾಯ್ದಿಹ । ಕುಂಡೋದರ । ಆರಿಯೆಯು ಮಮಬಲುಹ ॥ ತರಳನ ಕೆಣಕೆ ಸಂ । ಹರಿಸುವೆ ನಿನ್ನನು । ಶರಣೆನೆ ತಲೆಗಾಯ್ವೆನು ॥ ೩ ॥ ಸಲಹುವಡಾರು ನೀನು । ಪದ್ಮಾಸನ । ನಳಿನಾಕ್ಷ ಭರ್ಗನೇನು ॥ ಸಲದು ಯೆನ್ನೊಳು ನಿನ್ನ । ಗ್ಗಳಿಕೆಗಳೆನುತಲಿ । ಪೊಳೆವಾಯುಧವನೆತ್ತಲೂ ॥ ೪ ॥ ಖಡುಗವ ಸೆಳೆಯುತಾಗ । ಮಾರ್ಮಲೆತರೆ । ಬಿಡುವವನಲ್ಲ ಯಿಗಾ ॥ ಕಡುಗಲಿತನಬೇಡ । ಪೊಡಮಡು ನೀನೆನು । ತ್ತೊಡನೆ ಮುಷ್ಟಿಯೊಳಿರಗೇ ॥ ೫ ॥ ಜನಪತಿ ಬೀಳುತೆದ್ದು । ಕುಂಡೋದರ । ನನು ಗದೆಯಿಂದ ಹೊಯ್ದು ॥ ಘನತೆಯೊಳಿರಲವ । ಕಿನಿಸಿನಿಂ ಸೆಳೆವವ । ನನು ತಿವಿವೊರಗಿಸುತಾ ॥ ೬ ॥

ವಾರ್ಧಿಕ

ಮತ್ತವನ ವಂಶಮಂ ಸವರಿ ಗಣ ಜಯನೊಡನೆ । ಬಿತ್ತರಿಸಿತ್ತೈದು ನೀ ಬಾರ್ಕೂರಿಗೀಕ್ಷಣಂ । ಪೃಥ್ವೀಶನಹೆ ಮುಂದೆ ನಿನ್ನಯ್ಯನವನಿ ವಶಗೊಳಿಸೆಂದು ಕಳುಹಿ ತೆರಳೇ ॥ ಯಿತ್ತಮಾತ್ಯಂ ಪಟ್ಟಕರ್ಹರಾರೆಂದು ಗಜ । ಕಿತ್ತು ಸುಮಮಾಲೆಯಂ ಬೀದಿಯೊಳ್ ಬಿಡಲು ಕರಿ । ಯುತ್ಸಾಹದಿಂ ಬಪ್ಪ ಜಯನಿಗಿಕ್ಕಲ್ ವಾದ್ಯ ಘೋಷದ ತ್ಯುತ್ಸವದೊಳು ॥ ೧ ॥

ಭಾಮಿನಿ

ಕರೆದು ತಂದಾಸನವನೇರಿಸಿ । ವಿರಚಿಸಲು ಪಟ್ಟಾಭಿಷೇಕವ । ನೆರೆದ ನೃಪರೊಗ್ಗಿನಲಿ ಕಪ್ಪವ ನಿತ್ತರೇನೆಂಬೇ ॥ ತೆರಳಲಿಂತೊಂದಿನದಿ ಸಚಿವಂ । ಗರುಡಿಸೇನೆಯು ಕೂಡಿ ಪಾಂಡ್ಯಕೆ । ಭರದಿ ಮುತ್ತಲು ಚರರು ಪಾಯ್ದಿಂ ತೆಂದರವನಿಪಗೇ ॥ ೧ ॥

ರಾಗ ಮುಖಾರಿ - ಏಕತಾಳ

ತೆಕ್ಕೋಽಸಲಾಂ ಮಾಡ್ತೇವೊಡ್ಯಾ । ಕೊಡು ನಮಗಭಯ । ತೆಕ್ಕೋಽಸಲಾಂ ಮಾಡ್ತೇವೊಡ್ಯ ॥ ಪಲ್ಲ ॥ ಮುಂದಾಡಲವಧಿ ಯಿಲ್ಲವಯ್ಯ । ಚಂದ್ರಾಂಗದವ । ಸುಂಧರೆಯಧಿಪ ಲಾಲಿಸಯ್ಯ ॥ ಸಿಂಧುರ ತುರಗವು । ಸ್ಯಂದನ ಸೈನಿಕ । ಸಂದಣಿ ಯಿಂದೈ । ತಂದರೆ ತಡೆದಾ । ರೆಂದಡೆ ವೀರನ । ಕಂದನು ಜಯುತಾ । ಬಂದೆನು ಬಾರ್ಕೂ । ರಿಂದೆನೆ ಕೇಳಲು ॥ ತೆಕ್ಕೋ ॥ ೧ ॥ ಅಪ್ಪನವನಿಯನ್ನು ಸೆಳೆದೂ । ಗರ್ವದೊಳಿಹ ನಿ । ಮ್ಮಪ್ಪನೊಡನೆ ಧುರವ ಗೈದೂ ॥ ವಪ್ಪುವರಸೆಯನು । ತಪ್ಪದೆ ಪಡೆಯುವುವೆ । ಬಪ್ಪುದು ಸಮರಕೇ ದರ್ಪದೊಳೆಂದನು । ಮುಪ್ಪುರ ಹರನಂ । ತಿಪ್ಪನು ನೋಡ । ಲ್ಕಪ್ಪುದು ಭಯನಮ । ಗಿಪ್ಪದೆ ಜಯವು ॥ ತೆಕ್ಕೋಸಲಾಂ ॥ ೨ ॥

ಭಾಮಿನಿ

ಕೇಳಿ ಕಿಡಿಕಿಡಿಯಾಗಿ ಭೂಮಿಪ । ಕಾಲಭೈರವನಂತೆ ಗರ್ಜಿಸಿ । ಕೋಳುಗೊಳ್ಳುತ ಜಯನ ಜಯವನು ಪಡೆವೆ ತಾನೆಂದೂ ॥ ವೇಳೆ ಚರರಿಂಗೊರೆದು ಧೈರ್ಯವ । ಕಾಳಗಕೆ ಚತುರಂಗ ಸೇನೆಯ । ಮೇಳವಿಸಿ ಪರಬಲವ ಸವರುತಲೆಂದ ಜಯನೊಡನೇ ॥ ೧ ॥

ರಾಗ ಮಾರವಿ - ಏಕ ತಾಳ

ಆರೆಲೊ ಸೇನಾ । ವಾರಿಧಿ ಸಹಿತೀ । ಧಾರಿಣಿಗೈತಂದೂ ॥ ಶೂರ ನೆನ್ನೊಳು ಧುರ । ಸಾರಿದ ಕಾರಣ । ಪೋರನೆ ತಿಳುಹಿಂದೂ ॥ ೧ ॥ ಅರಿ ತಿರು ಕುಂಡೋದರ । ಶರಣನು ಜಯ । ಧೊರೆನಾ ವಾರ್ಕೂಲ ॥ ಗರುವದಿ ಮತ್ತಿತ । ನುರುವಿಯ ಸೆಳದೆಯ । ಕರುಣಿಪುದೆಲೊ ಖೂಳ ॥ ೨ ॥ ಬಡಿ ವಾರದ ನುಡಿ । ಬಿಡು ನಿನ್ನಯ ಪಿತ । ಬಿಡದೋಡಿದ ರಣದೀ ॥ ಹುಡುಗ ನೀನಾತಗೆ । ಕಡು ಹ್ಯಾತಕೆೊ ಪೋ । ಗೊಡನೆ ಪುರಕೆ ಸುಖದೀ ॥ ೩ ॥ ಕದನದಿ ನಿನ್ನನು । ಸದೆಬಡಿದಿಳೆಯನು । ಚದುರತೆಯಿಂ ಪಡೆದೂ ॥ ಸದನಕೆ ಪೋಪೆನು । ಮುದಮುಖರಂದದೊ । ಳೊದರುವೆ ಯೇಕಿನಿತೂ ॥ ೪ ॥

ರಾಗ ಕಾಂಬೋದಿ - ಝಂಪೆ ತಾಳ

ನರಿಯುದರದೊಳಗೆ ಕೇ । ಸರಿಯು ಜನಿಸುವದುಂಟೆ । ಮುರುಳಿ ಕೇಳೆಲವೊ ಹೆಬ್ಬುಲಿಯಾ ॥ ಹರಿಸುವೆನೆನುತ್ತ ಕುರಿ।ಮರಿ ಪೋದರೆಂತಪ್ಪು । ದರಿತು ಕೆಲಸಾರು ಮೂಢಾತ್ಮ ॥ ೧ ॥ ಮೊದಲ ಶ್ರವಣಾಂಗದಿಂ । ದಧಿಕ ಬಲವಿಹುದು ಮ । ತ್ತುದಿಸಿರ್ದ ಕೋಡುಗಳಿಗಹುದೇ ॥ ಯುದ್ಧದೊಳು ಪಿತನಸೀ । ಗೆದ್ದಹಮ್ಮಿನ ಪಿತ್ತ । ಗುದ್ದಿಯಿಳಿಸುವೆನು ಕ್ಷಣದೊಳಗೇ ॥ ೨ ॥ ಕರುಣದಲಿ ಭೂತ ಸಂ । ಹರಿಸದುಳಿಸಲು ನಿನಗೆ । ಮರಣವಿಲ್ಲೆನುತ ಹಾರ ವಿರೂ ॥ ಮರುಳುಕರಿಧೊರೆಗೈದ । ಪೌರುಷದಿ ಬರಲು ತನ । ಶಿರವನಿಳು ಹುವೆ ತಡೆವರಾರು ॥ ೩ ॥ ಪಟ್ಟದಾನೆಯು ಮಾಲೆ । ಯಿಟ್ಟೆಲ್ಲರೊಮ್ಮತದಿ । ವಿಷ್ಟರವನಿತ್ತು ಮಣಿದಿಹರೂ ॥ ಭ್ರಷ್ಟ ಕೇಳ್ ಗಣವೆನ್ನ । ಯಿಷ್ಟದಿಂ ಪೊರೆದುದಕೆ । ತುಷ್ಟಿಗೊಳಿಸುವೆ ನಿನ್ನ ಸೀಳೀ ॥ ೪ ॥

ರಾಗ ಮಾರವಿ - ಝಂಪೆ ತಾಳ

ಮತ್ತು ಮತ್ತೆನ್ನೊಡನೆ । ಸತ್ವಯುತನೆಂದೆನುತ । ನಿತ್ತುತ್ತರಿಸು ವೆಯಾ ಧೂರ್ತ ॥ ಮತ್ತತನವಿಳಿಪೆನೆನು । ತೆತ್ತಿ ಖಡ್ಗದಿಪೊಯ್ದು।ಪೃಥ್ವಿಪತಿ ಚಂದ್ರಾಂಗದಾಖ್ಯ ॥ ೧ ॥ ಖಡುಗವನು ಸೇದು ಜಯ । ಕಡುಹಿನಿಂದಿರಿಯು ಲವ । ಪೊಡವಿಗುರುಳುತಲೆದ್ದು ಗಧೆಯಾ ॥ ಪಿಡಿದೊಡನೆ ವಶಗೈದ್ದು । ಖಿಡಿಮುಸಗುತಸಿಯಿಂದ । ಕಡಿದಿಡಲು ನೃಪನಶಿರಧರೆಗೇ ॥ ೨ ॥

ಭಾಮಿನಿ

ಶರಣೆನುವ ಪ್ರಜೆಗಳನು ಮನ್ನಿಸು । ತಿರದೆ ವಶಗೊಳಿಸುತ್ತ ರಾಜ್ಯವ । ಹರುಷದಿಂ ಬಾರ್ಕೂರಿಗೈದುತ ಸುಖದೊಳಿರೆ ಜಯನು ॥ ವರವೆನಿತ್ತಲು ಪಾಂಡ್ಯನಾಪ್ತನು । ತೆರಳುತುತ್ತರ ದಿಶೆಗೆ ಹಡಗದಿ । ದೊರೆತ ಲಾಭದಿ ನಾವೆಯೆರಡನು ಕೊಳುತ ಮುಂಬರಿಯೆ ॥ ೧ ॥

ವಾರ್ಧಿಕ

ಬಳಿಕಲಾ ಹಡಗುಗಳು ಹಿಮರಾಶಿಯೊಳ್ ಸಿಲುಕಿ । ಮೇಲುವರಿಯದಿರಲ್ಕೆ ನಾರಾಯಣನು ಚಿಂತೆ । ತ್ತಾಳುತೆಲ್ಲವ ರೊಂದುಗೂಡಿ ಭೂತೇಶನಂ ಧ್ಯಾನಿಸುತ ಹರಕೆಗಳನೂ ॥ ಪೇಳ್ದಡೆ ಮತ್ತಧಿಕ ವೇಗದಿಂ ಗಮಿಸಿದುದು । ಕೇಳಿತನಿತರೊಳೊಂದು ವಾಣಿ ಪಡುವಣ ಗಿರಿಯ । ಮೇಲಿರ್ಪ ಸಿದ್ಧರಸ ಹಸುರವೃತ ಶಿಲೆಗಳಂ ಕೊಂಡು ನೀ ಪೋಗೆಂದೆನೇ ॥ ೧ ॥

ರಾಗ ಸಾಂಗತ್ಯ . ರೂಪಕ ತಾಳ

ನಾರಾಯಣನು ತೋಷ । ವೇರಿ ಸೇವಕರ್ಸಹ । ಸೇರಿ ಪಶ್ಚಿಮ ಗಿರಿಯೊಳಿರುವಾ ॥ ಚಾರು ವಸ್ತುಗಳನ್ನು । ಹೇರಿಸಿ ಹಡಗದಿ । ಸಾರಿದ ನಿಜ ಪುರಕೆನುತಾ ॥ ೧ ॥ ಬರುತಲಲ್ಲಲ್ಲಿಂದ । ದೊರಕಿದ ದ್ರವ್ಯ ಶೇ । ಖರಿಸುತ್ತ ವರುಷವಾರಾಗೇ ॥ ವರ ಬಾರಕೂರ ಬಂ । ದರವಹ ಕಲ್ಯಾಣ । ಪುರದೊಳು ನೆಲಸಲೀವಾರ್ತೆ ॥ ೨ ॥ ಧಾತ್ರೀಶ ಜಯ ತಿಳಿ । ವೃತ್ತ ನಾರ್ಯಾಣನ । ಹತ್ತಿರ ಬರಿಸಿ ಕೇಳಿದಡೇ ॥ ಬಿತ್ತರಿಸಲು ಕರೆ । ಸುತ್ತ ಮಾತುಳನೊಳು । ವರ್ತಮಾನವ ಪೇಳೆಬಳಿಕಾ ॥ ೩ ॥ ತೀವಿದುತ್ಸಹದಿಂದ । ದೇವಪಾಂಡ್ಯನು ತನ್ನ । ನಾವೆಯೊಳಿಹ ದ್ರವ್ಯದರ್ಧ ॥ ಈವುದು ಜಯಗೆನೆ । ಸೇವಕರ್ಪೋಗಿ ಮು । ತ್ತಾ ವಸ್ತುಗಳ ನಿಳುಹಲ್ಕೇ ॥ ೪ ॥

ವಾರ್ಧಿಕ

ಭೂತವೈದೋರುತಾಕ್ಷಣ ದೇವನೊಳು ನಿನ್ನ । ಜಾತನೋರ್ವನ ಬಲಿಯ ನೀಯದಿರೆ ಬಿಡೆನೆನಲು । ಪ್ರೀತೆ ಶಿವದೇವಿಯಂ ಬರಿಸಿ ಕೇಳಿದಡವಳು ಸಿರಿಗಾಗಿ ಮತ್ಸ್ಯವರರಾ ॥ ಘಾತಿಸಲ್ಕೀಯೆ ತವ ಸರ್ವಸ್ವಮಂ

ಬಯಸಿ । ಮಾತು ಧಿಟವಿದು ಬಂದೆ ಗಳಹದಿರು ನೀನೆಂದು । ಖಾತಿಯಿಂ ಪಿತೃಗೃಹಕೆ ತೆರಳಲಾ ಗಣ ಪಾಂಡ್ಯ ಮೊದಲಾದ ಸಭಿಕರೊಡನೇ ॥ ೧ ॥

ರಾಗ ಕೇದಾರಗೌಳ - ಝಂಪೆ ತಾಳ

ಕೇಳಿರೆಲ್ಲಾ ಪ್ರಜೆಗಳೂ । ನಾಳಿನಲಿ । ವೋಲಗಕೆ ಬಹುದಾಗಲೂ ॥ ಪೇಳ್ವೆನಿದರಿತ್ಯರ್ಥವಾ । ನಿಮ್ಮೊಡನೆ । ಜಾಲವಲ್ಲವಿದೆನ್ನುತಾ ॥ ೧ ॥ ಚಿತ್ರದಲಿ ನೆನೆದು ಗಣವೂ । ವಿಕ್ರಮಾ । ದಿತ್ಯನಾಳಿದ ಪೀಠವೂ ॥ ಧಾತ್ರೀಶ ನಿವಗಪ್ಪುದೂ । ತಂದು ನಾ । ನಿತ್ತಪೆನು ಯೆನುತೈದ್ದುದೂ ॥ ೨ ॥

ಕಂದ ಪದ್ಯ

ತೆರಳುತ ಬೇಗನೆ ಜೆಳ್ಳಿಯ । ಗಿರಿಯೊಳ್ ಷಣ್ಮುಖ ಸಿದ್ಧಿ ವಿನಾಯಕ ಶಿವೆಸಹ ॥ ಸುರುಚಿರ ಪೀಠದೊಳಿಹ ಶಂ । ಕರನಡಿಗೆರಗುತಲಿ ಪ್ರಾರ್ಥಿಸಿ ತೀತೆರದಿಂ ॥ ೧ ॥

ವಾರ್ಧಿಕ

ಜಯತೇಕ ರೂಪ ಜಯ ಜಯತು ದ್ವಿಜಾರಾಧ್ಯ । ಜಯ ತ್ರಿಗುಣ ಪೂರ್ಣ ಜಯ ಚತುರಾಸ್ಯಮದ ಹರಣ । ಜಯ ಜಯತು ಪಂಚಾಸ್ಯ ಷಟ್ಶಾಸ್ತ್ರಕಾಧಾರ ಸಪ್ತಾರ್ಚಿನೇತ್ರ ಜಯತೂ ॥ ಜಯ ತಷ್ಟಮೂರ್ತಿ ಜಯ ಜಯತು ನವಗ್ರಹಪೂಜ್ಯ । ಜಯತು ದಶದಿಗ್ವ್ಯಾಪ ಶತಪತ್ರಪಾಣಿ ಸಖ । ಜಯ ಸಹಸ್ರಾಕ್ಷನುತ ಜಯ ಕೋಟಿಯಿನತೇಜ ಜಯತಮಿತ ಮಹಿಮ ಜಯತೂ ॥ ೧ ॥

ರಾಗ ಕಾಂತಾರ - ಝಂಪೆ ತಾಳ

ಇಂತುಸನ್ನುತಿ ಗೈವ ಭೂತವನು ಪಿಡೆದೆತ್ತಿ । ಕಂತು ಹರನೆಂದ ನಸುನಗುತಾ ॥ ಚಿಂತಿಸದೆ ನಿನ್ನಂತರಂಗ ವೆನ್ನೊಡನರುಹೆ । ಸಂತಸಮೊಳೀವೆ ನಿದುಸತ್ಯ ॥ ೧ ॥ ಯೆನಲು ಶಿರಚಾಚುತ್ತ ದೇವದೇವನೆ ಯೆನ್ನ । ನನವರತ ಪೂಜಿಸುವ ಜಯಗೇ ॥ ಜನಪ ವಿಕ್ರಮನೇರ್ದ ಸಿಂಹ ವಿಷ್ಟರವನ್ನು । ವಿನಯದಿಂದೊಯ್ಯಲಾ ಬಗೆಗೇ ॥ ೨ ॥ ಬಂದೆನನುಮತಿಯಿತ್ತು ತಂದೆ ನೀ

ಸಲಹೆಂದ । ಡಿಂಮಧರ ನಗುತ ಲಾ ಪೀಠ ॥ ವಿಂಧ್ಯಾದ್ರಿಯಲ್ಲಿಹುದು ಕೊಂಡುಪೋಗೆನೆ ಕೇಳಿ । ವಂದಿಸಲು ಹರಿಸಿ ಬೀಳ್ಕೊಟ್ಟ ॥ ೩ ॥

ಭಾಮಿನಿ

ಬರುತ ವಿಂಧ್ಯಾಚಲದಿ ಕುಂಡೋ! ದರವು ವಿಸ್ತರವನ್ನು ಕಾಣುತ । ಭರದೊಳೊಯ್ಪೆನೆನುತ ತುಡುಕಿದಡಾಗಲದ ತಿಳಿದೂ ॥ ನಿರತವದಕಾ ಯ್ದಷ್ಟ ಭೈರವ । ರರದೆ ಹೂಂಕರಿಸುತ್ತ ಕ್ರೋಧದೊ । ಳುರಿಮಸಗಿ ಮುಂದೊತ್ತಿ ಗಣವನು ತಡೆದು ಪೇಳಿದರೂ ॥ ೧ ॥

ರಾಗ ಭೈರವಿ - ಅಷ್ಟ ತಾಳ

ಮದಮುಖ ಯಾರೊ ನೀನು ! ಸಿಂಹಾಸನ । ವಿದನೀಗ ವಯ್ವ ದೇನು ॥ ಮದರದಿಲ್ಲಿಯೆ ಬಿಟ್ಟು । ಸದನಕಾಗಿಯೆ ಪೋಗು । ಸದೆವೆವು ತಳು ವಿದಡೇ ॥ ೧ ॥ ಆರಾದರೇನ್ ನಿಮಗೇ ! ಯೆನ್ನುವನು ವಿ! ಚಾರಿಸಲೇಕೆ ಹೀಗೆ ॥ ಶೂರತನಂಗಳ । ತೋರಲುಳಿಯಗೊಡೆ । ಸಾರಿ ಹೇಳದೆ ನೀಗಲು ॥ ೨ ॥ ಅಷ್ಟ ಭೈರವರು ನಾವು! ಕಾಯ್ತಿರುವ ಯಿೂ । ವಿಷ್ಟರ ನಿನಗೀಯೆವು ॥ ಭ್ರಷ್ಟನೆನ್ನಯ ಬಲು । ಹೆಷ್ಟೆಂಬುದರಿಯದೆ । ಕೆಟ್ಟು ಹೋಗದಿರು ನೀನೂ ॥ ೩ ॥ ಪಂಚಾಸ್ಯನರುಹಲಾಗೀ । ಬಂದಿಹೆ ನೀವ್ರಿ । ಪಂಚಾಕ್ಷನೆಡೆಗೆ ಪೋಗೀ ॥ ಪಂಚಾಸ್ಯನನು ಕುರಿ ! ಸಂಚಯ ಗೆಲಲುಂಟೆ । ಮುಂಚೆ ನಾನ್ನೊವೆನಿದ ॥ ೪ ॥

ರಾಗ ಶಂಕರಾಭರಣ : ಮಟ್ಟೆ ತಾಳ

ನಿಲ್ಲು ನಿಲ್ಲು ಮಲ್ಲನಂತೆ । ಯೆಲ್ಲಿಪೀಠ ಸಹಿತಪೋಪೆ । ಹಲ್ಲ ಮುರಿವೆ ನೆನುತ ಮುಷ್ಟಿ । ಯಲ್ಲಿ ತಿವಿಯಲು ॥ ೧ ॥ ಮೆಲ್ಲನದನು ಪರಿಹರಿಸುತ । ಹಲ್ಲ ಮುರಿವದೆಲಪೊಮಯಣ । ದಲ್ಲಿ ನಿಲ್ಲಿಸಿಲ್ಲ ನಿಮ್ಮ । ಚಲ್ಲ ಬಡಿವೆನೂ ॥ ೨ ॥ ಬಂದು ಗಣವು । ಮುಂದುವರಿವು । ತಂದು ಖಡ್ಗದಿಂದಲಿರಿಯೆ । ಕುಂಪದದನು ಹರಿಸಿ ಪೊಯ್ದು । ರೊಂದು ಗೂಡುತಾ ॥ ೩ ॥ ಮತ್ತೆ ಭೂತ ನುಸುಳಿ ತಪ್ಪಿ । ಸುತ್ತ ಮಲ್ಲಯುದ್ಧ ಕೊಡಗಿ । ಸತ್ವದಿಂದ ಕಾದು ತಿರಲು । ವೃತ್ಯುಹರನೊಲೂ ॥ ೪ ॥

ಭಾಮಿನಿ

ಧುರವ ನೆಸಗದಿರೀತನೆನ್ನಯ । ಚರಣ ಸೇವಕನೆಸಿಹನು ವಿಪ್ರರ । ಕರುಣಿಸುವದೆನೆ ನಭನುಡಿಯ ಕೇಳ್ದಾಗ ಬೈರವರೂ ॥ ಸರಿಯೆನುತ ರಣ ನಿಲಿಸಿ ಕುಂಡೋ । ದರನ ಮನ್ನಿಸಿ ಕಳುಹಲಾಕ್ಷಣ । ಪರಮ ಪೀಠವ ತಂದು ಬಾರ್ ಕೂರಿನೊಳು ನೆಲೆಗೊಳಿಸಿ ॥ ೧ ॥

ರಾಗ ಸೌರಾಷ್ಟ್ರ - ತ್ರಿವುಡೆ ತಾಳ

ಕರೆದು ಜಯನನು ಪೀಠದೊಳು ಕು । ಳ್ಳಿರಿಸಿ ಹರಸುತ ಭೂತ ತ್ತೋಪದಿ । ನೆರೆದ ಸಭಿಕರ ಮುಂದೆ ಪಾಂಡ್ಯನಿ । ಗೊರೆಯಿತಿಂತೂ ॥ ೧ ॥ ಅಂದುಳಿದೆ ತವಸಹಜೆ ತನ್ನಯ । ಕಂದನನು ತಂದಿತ್ತ ಕಾರಣ । ಹೊಂದಿತೀ ಸಂಪದವು ನಿನ್ನೆಯೊ । ಳ್ಬಂದು ನಿನ್ನ ॥ ೨ ॥ ಮಡದಿ ಸುತನನು ಕೊಡದೆ ಭಾಗ್ಯದ। ಗೊಡವೆ ತನಗಿಲ್ಲೆನುತ ಹಕ್ಕನು । ಕಡೆಗಣಿಸಿ ತ್ಯಜಿಸಿದಳು ನಿನ್ನನು। ಧಡಿಗ ತನದೀ ॥ ೩ ॥ ಆದಕಾರಣ ಹಡಗವೀ ಧನ । ಮೇಧಿನಿಯ ಸಹಿ ತಳಿಯುಗೀವುದು । ಸಾದರದೊಳೆನೆ ದೇವನಿತ್ತನು । ಮೋದದಿಂದ ॥ ೪ ॥ ಬಳಿಕ ಜಯನೊಳು ತನ್ನ ದೆಸೆಯಿಂ । ದಿಳೆಯಧಿಪ ನೀನಾದೆಯಾ ಭೂ । ತಾಳಪಾಂಡ್ಯನೆನಿಪ್ಪ ನಾಮದೊ । ಳಾಳು ರಸೆಯ ॥ ೫ ॥ ನಿನ್ನ ವಂಶಜ ರಳಿಯ ಕಟ್ಟನು । ಸನ್ನುತದೊಳಾಚರಿಸು ತಿಹುದಿವ। ಮನ್ನಿಸದ ಮನುಜ ರಿಗೆ ಮುನಿದಪೆ। ನಿನ್ನ ನೀನೂ ॥ ೬ ॥ ಚಲುವ ಗುಡಿಕಟ್ಟಿಸಿ ಪ್ರತಿಷ್ಟಿಸು । ತೊಲವಿನಿಂ ಪೂಜಿಸುವ ದನುದಿನ। ತಳುವದೀಗಲೆ ಸಿದ್ದರಸ ಹೆಸರ್ । ಶಿಲೆ ಗಳನ್ನೂ ॥ ೭ ॥ ಸ್ಥಾಪಿಸನಂತ್ತೇಶಾಲಯದ ಬಳಿ । ಕೂಪ ಒಂದನಲೆನುತ ಭೂತ ನಿ । ರೂಪಿಸಿಯೆ ಹರಸುತ್ತ ತೆರಳಲು । ಭೂಪ ಬಳಿಕ ॥ ೮ ॥

ವಾರ್ಧಿಕ

ಸಿದ್ಧರಸ ನೊದಲಾದ ವಸ್ತುವಂ ಕೂಪದೊಳು । ಹೊದ್ದಿಸಿಯೆ ಕನಕ ಬಾವಿಯ ಸಹಿತಲಾ ನೃಪಂ । ಭದ್ರವಾಗಿರಿಸುತ್ತ ಬಲ್ಲ ಶಿಲ್ಪಿಗಳನ್ನು ಕರೆ ತರಿಸುತವರಿಂದಲೀ ॥ ಶುದ್ಧವಾದಾಯದೊಳ್ ಗುಡಿಯನುಂ ಮೂರ್ತಿಯಂ। ತ್ರಿಪ್ಟಿಯೊಳು ರಚಿಸಿ ಪ್ರತಿಷ್ಟಿಸಲು ಶುಭದಿನವ । ಬುದ್ದಿಯುತರಿಂದಾಯ್ದು ತಿಲ್ಲರಂ ಬರಿಸಿ ವಿಪ್ರರ ಕರೆಸಲ್ಕೆ ತಂದರೂ ॥ ೧ ॥

ರಾಗ ಕಾಂಬೋಧಿ - ಝಂಪೆ ತಾಳ

ಜಾನೆ ಮಾಂಪುಸೆ ಮಾಣಿ । ಜನನಾಥೆ ಮಳೆಪುನಗ । ಯಾನೆಂಚ ಪೋವಾಂತೆ ಕುಳ್ಪಿ ॥ ಅನಂತಯ್ಯ ನಿಲ್ಲೊಳುತ । ಘನವಾಯಿ ಶ್ರಾದ್ಧೊಂಕ್ । ಶೀನೆ ಪೋವಾಡೇನ್ ಪಣ್ಪೆ ॥ ೧ ॥ ಬರಡ್ ನಾರಾಯಣೆಲ । ಹರಿಕೃಷ್ಣೆ ಕೇಶವೆಲ । ಪರಿಚಾರ್ಕೆ ವೆಂಕ್ಟೇಶನೊಳೆಪ್ಪು ॥ ನರಸಿಂಹೆ ಕೈಬಟ್ಟ್ । ಪರಪಟ್ಟೆ ಕ್ಯಾತಮಂ । ತರೆ ಚೀಲೊ ನೀ ಕೈಟ್‌ಪತ್ತ್ ॥ ೨ ॥

ಕಂದ ಪದ್ಯ

ಇಂತಾ ಮಾಧವನಃಂ ದ್ವಿಜ । ತಿಂಥಿಣಿಯಿಂಬರಲುತ್ಸಾಹದೊಳವ ರೆಂದುದ ॥ ನುಂತಳುವದೆ ಜಯನಿತ್ತಡೆ । ಮಂತ್ರೋಕ್ತದೊಳೀಪರಿಕಾರ್ಯವ ಕೈಗೊಂಡರ್ ॥ ೧ ॥

ರಾಗ ಖಮಾಚ್ - ತ್ರಿವುಡೆ ತಾಳ

ಬಲ್ಲಣಿಂಚಿ ಗಿಂಡಿಗೇತೊಣು । ವೆಂಕ್ಟೇಶನೊಳೆತ್ತ್ । ಬಲ್ಲಣಿಂಚಿ ಗಿಂಡಿಗೇತೊಣು ॥ ಪಲ್ಲ ॥ ಶಂಭುಮಗೆ ವಿಘ್ನೇಶೆ ನಂ । ಕಿಂಬುಕೊಳಡ್ ಕೆಲಸೊಂಕೈತ್ । ನುಂಬುಪೂಜೆ ಮಾಂತ್‌ತೆಡ್ಡೆ । ರಂಭಫಲೊ ನೈವೇದ್ಯೊ ಮಾಂಪು ॥ ಅ. ಪ. ॥ ಮಂತ್ರೊಂಟೊಂಜೊ ಗ್ರಹೆರಾವಾಹನೆ । ಪೈಸಕ್ಯಾತ । ಮಂತ್ರೆ ಇಜಿತ್ ಕಲಶೊತರ್ಚನೆ॥ಚಿಂತೆಬೋತ್ರಿ ರಾಮಕೃಷ್ಣ । ತಂತ್ರೊಪಾಪು ದಿಗಧಿಪೆರೆಗ । ನಂತೆ.ಪೂಜೆಮಾಂಪು ಹೋಮೊ । ಸ್ವಂತೊ ಮಾಂಪೆ ಬ್ರಹ್ಮೆ ಕುಳ್ಪು ॥ ಬಲ್ಲಣಿಂಚಿ ಗಿಂಡಿಗೇತೊಣು ॥ ೧ ॥ ಅಷ್ಟಬಂಧೊಮಾಂತ್ ಮೂರ್ತಿನ್ । ಗೇತ್‌ತ್ ಪ್ರ । ತಿಷ್ಟೆಮಾಂಪಿ ಮೂರ್ತೆಬತ್ತ್‌ನ್ ॥ ಸೃಷ್ಟಿ ಪತಿ ಬ್ರಾಹ್ಮಣೆರೆ ಮನಸಂ । ತುಷ್ಟಿಗಾತ್ ಪುತ್ತೊಳಿ ಪಣವು । ಪಟ್ಟೆದಾನೊ ಮಾಂತ ಕೊಳುತು । ಒಟ್ಟುಗಿಂತ್ ತಿಷ್ಟೊಕೇಣಿ ॥ ಬಲ್ಲಣಿಂಚಿ ಗಿಂಡಿ ಗೇತೊಣು ॥ ೨ ॥

ಭಾಮಿನಿ

ಈ ತೆರದಿ ವಿಗ್ರಹ ಪ್ರತಿಷ್ಟಿಸಿ । ಭೂತಳಾಮರ ರರ್ಚಿಸಲ್ಕಾ । ಭೂತ ವೈದೋರುತ್ತ ನಸುನಗೆ ಬೀರುತಿರಲಂದೂ ॥ ಖ್ಯಾತ ನಾರಾಯಣನ

ಮತದಿಂ । ದೋತು ಪರಿಪರಿ ವಸ್ತುಗಳ ಜನ । ಸಾಥನರ್ಪಿಸಿ ಮಂಗಳಾರತಿ ಬೆಳಗಿನುತಿಸಿದನು ॥ ೧ ॥

ರಾಗ ಧನಳಾರ - ಏಕ ತಾಳ

ಹರನ ಪ್ರಮಥರೊಳು ಶ್ರೇಷ್ಟನಿಗೇ।ದುರಿತವಿದೂರ ಕುಂಡೋದರಗೇ॥ ಕರುಣಿಸುತಸುಪನ್ನೀರಸೆಯೊಡೆತನ । ಹರುಷದಿ ತನಗೊಲಿದಿತ್ತವನೆನ್ನುತ । ಕುರುಜಿನಾರತಿಯೂ ಬೆಳಗಿದನು ॥ ಶೋಭಾನೆ ॥೧॥ ಶರಧಿಯೊಳ್ ನಾವೆಯ ಕಾಯ್ದು ವಗೇ । ಪರಮವಿಸ್ತರ ತಂದಿತ್ತವಗೇ ॥ ವರತುಳು ನಾಡಿಂಗಳಿಯ ಕಟ್ಟರುಹಿದ ।ಶರಣವತ್ಸಲ ಸಲಹನುದಿನವೆನುತಲಿ । ಸುರುಚಿರ ದಾರತಿಯೂ ಬೆಳಗಿದನೂ ॥ ಶೋಬಾನೆ ॥ ೨ ॥

ವಾರ್ಧಿಕ

ಯೆತ್ತಲಾರತಿಯು ಗಣ ತೋಷದೊಳ್ ನೃಪನ ಹರ । ಸುತ್ತ ಲಂತ ರ್ಧಾನ ವಾಗಲದ ರಾಜ್ಞೆಯೊಳ್ । ಮತ್ತಳಿಯ ಸಂತಾನಕಟ್ಟು ಬಳಿ ಶಾಸ ನವ ದೈವದಾಲಯದೊಳಿರಿಸೀ ॥ ನಿತ್ಯ ಪೂಜಿಸುವ ತೆರನರ್ಚಕರ ನೇಮಿ ಸುತ । ಋತ್ವಿಜರ ಕಳುಹಿ ತನ್ನಾಪ್ತ ಮಲೆಯಾಳಧಾ । ರಿತ್ರಿಪತಿ ಪೆರುಮಾಳ ನಂ ಬರಿಸುತೀ ನಿಯಮವನು ಸರಿಸುವಂತೆ ಪೇಳೀ ॥ ೧ ॥ ಸುತ್ತಲಿಹ ಪೃಥ್ವಿಪರ ಜೈಸುತ್ತ ಕರವ ಹೊರಿ । ಸುತ್ತವರ ಮಸ್ತಕದಿ ಭಂಡಾರಕಾಗಿ ತರಿ । ಸುತ್ತ ಶೇಖರಿಸುತ್ತ ಹತ್ತು ಮತ್ತೆರಡು ಸ್ತ್ರೀರತ್ನಗಳ ವರಿಸುತ್ತಲೀ ॥ ಸ್ತುತ್ಯಗುಣ ಪುತ್ರರಂ ಪಡೆವುತ್ತ ಶತಪುತ್ರ । ಮಿತ್ರ ತೇಜದಿ ರಾಜಿಸುತ್ತಲಿಹ ವಿಸ್ತರದಿ । ಸತ್ಯ ಸತ್ಕೀರ್ತಿಯಿಂ ಭೂತಾಳಪಾಂಡ್ಯ ತುಳುಧರೆಯ ಪಾಲಿಸು ತೀರ್ದನು ॥ ೨ ॥

ರಾಗ ಸೌರಾಷ್ಟ್ರ · ತ್ರಿಪುಡೆ ತಾಳ

ಇಂತಳಿಯ ಸಂತಾನವಾದ ಮ । ಹಾಂತ ಚರಿತೆಯ ಯಕ್ಷಗಾನದಿ । ಕಂತುಹರನನು ನೆನೆದುಸುರ್ದೆನು । ಸಂತಸದೊಳು ॥ ೧ ॥ ಆರಿಯದವನಿಹೆ ಕೃತಿಯ ಶಾಸ್ತ್ರವ । ಕರುಣೆದೋರುತ್ತೆನ್ನಜಿಹ್ವೆಯೊ । ಳ್ವರದೆ ಭಾರತಿ ನೆಲಸಿ ಪೇಳ್ದೋಲ್ । ಬರೆದೆನಿದರಾ ॥ ೨ ॥ ದೊರೆತ ತಪ್ಪನು ತಿದ್ದಿ ಹಂಸ । ಕ್ಷೀರ ನ್ಯಾಯದೊಳೋದೆ ಜನರಿದ । ವಿರಚಿಸಿದಕಾಂ ಧನ್ಯ ನಮ್ಮನು । ಪೊರೆವ

ಶಿವನೂ ‖ ೩ ‖ ಕನ್ನಡದ ಕಾಸ್ರಗೋಡನ್ನೈದಿಹ । ಪನ್ನರಾಣ್ಮೆಯೊಳಿಂದು ಬಳಲುವ । ಕನ್ನಡಾಂಬೆಯು ಸೇರೆಬಿಡಿಸುನೀ । ನೆನ್ನು ತಾನೂ ‖ ೪ ‖ಕನ್ನಡಾಕ್ಷರ ಸುಪದಹಾರವಿದನ್ನು ರಚಿಸುತ ದೇವ ದೇವನೆ । ನಿನ್ನ ಪದಕರ್ಪಿಸುವೆ ಸಲಹೈ । ಕನ್ನಡಿಗರಾ ‖ ೫ ‖

ವಾರ್ಧಿಕ

ಈ ಮಹಿಯು ಕೇರಳದ ಕಾಸ್ರಗೋಡ್ತಾರಡ್ಕ'। ಧಾಮ ಅಂಬೇಮೂಲೆ ವಾಸ ಕವಿಕುಲ ಜಾತ । ಭೂಮಿಸುರ ಹವ್ಯಕ ಕಡೆಂಗೋಡ್ಲ ರಾಮಾಖ್ಯನವರ ಸುತ ಗೋವಿಂದ ನಾಂ ‖ ನಾಮ ಶುಭಕೃತ್‌ವತ್ಸರದ ಚೈತ್ರ ಸಿತ ಷಷ್ಠಿ । ಭೌಮ ವಾಸರದೊಳೀ ಕೃತಿಗೆ ಮಂಗಲ ಗೈದೆ । ಸೋಮಾಧರನೊಲುಮೆಯಿಂ ವಚನವರ್ಣವ್ಯೋಮ ಸಂಜ್ಞೆ ಪದಗಣನೆಗಿಹುದೂ ‖ ೧ ‖

ಮಂಗಲಗಾನ

ರಾಗ ಆಹೇರಿ - ಝಂಪೆ ತಾಳ

ಶ್ರೀ ರಮಾಧವಸಖಗೆ । ತರಣಿಶತತೇಜನಿಗೆ । ಸರಸೀರುಹಾಪ್ತೇಂದು ಶಿಖಿನಯನಗೇ ‖ ವಾರಿಜಾಸನ ಸುರಪ ಸಿದ್ಧಾದಿ ಸನ್ನುತಗೆ । ಮಾರಾರಿ ಸಾಂಬ ನಿರುಪಮ ಭರ್ಗಗೇ ‖ ಜಯ ಮಂಗಲಂ ನಿತ್ಯ ಶುಭ ಮಂಗಲಂ ‖ ೧ ‖ ಶರಜ ಗಣನಾಥ ರೊಡಗೂಡಿ ಸಂಭ್ರಮದಿ ವೃಗ। ಪರಮ ವರದಾ ಭೀತಿ ಹಸ್ತನೆನಿಸೀ ‖ ಗಿರಿಸುತೆಗೆ ವಾಮಾಂಕವಿತ್ತಲಂಕೃತದಿ ಹರಿ । ಹರಿ ಪೀಠದೊಳು ಮೆರೆವ ಶಶಿಮೌಳಿಗೇ ‖ ಜಯ ಮಂಗಲಂ ನಿತ್ಯ ಶುಭ ಮಂಗಲಂ ‖ ೨ ‖ ಗರಳಕಂಧರಗೆ ಫಣಿ ಭೂಷ ಗಂಗಾಧರಗೆ । ದುರಿತಹರ ಕಾಲಾಂತಕಗೆ ಶರ್ವಗೇ ‖ ಶರಣ ವತ್ಸಲಗೆ ವಿಶ್ವೇಶ ಶಾಶ್ವಿತಗೆ ಮಮ । ಗುರುನಂದಿಕೇಶ್ವರಗೆ ಶ್ರೀ ಶಿವನಿಗೇ ‖ ಜಯ ಮಂಗಲಂ ನಿತ್ಯ ಶುಭ ಮಂಗಲಂ ‖ ೩ ‖ ಶ್ರೀ ಶ್ರೀ ಶ್ರೀ ಶ್ರೀ ‖ ಶುಭಮಸ್ತು ‖ ಶ್ರೀ ಕೃಷ್ಣಾರ್ಪಣಮಸ್ತು ‖ ಅಂತೂ ಸಂಧಿ ಒಂದಕ್ಕಂ ಮಂಗಲಮಸ್ತು ‖

ಆದರ್ಶ ಪ್ರೆಸ್, ಪುತ್ತೂರು